UNIVERSAL
LIBRARY
OU_200431
UNIVERSAL
LIBRARY

NARASIMHARAJA WADIYAR SERIES

# ಮಾಲತೀ

ಬಿ. ವೆಂಕಟಾಚಾರ್ಯ

NARASIMHARAJA WADIYAR SERIES

# ಮಾಲತೀ

ಬಿ. ವೆಂಕಟಾಚಾರ್ಯ

ಕ್ರಯ **3** ಆಣೆ.

# ವಿಜ್ಞಾಪನೆ

ಶ್ರೀ ಸ್ವರ್ಣಕುಮಾರೀದೇವಿಯವರಿಂದ ಪ್ರಣೀತವಾದ ಮೂಲಗ್ರಂಥದ ಅವಲಂಬನದಿಂದ ಈ ಗ್ರಂಥವು ರಚಿಸಲ್ಪಟ್ಟಿತು ಉಪನ್ಯಾಸವು ಚಿಕ್ಕದಾದರೂ ಅತ್ಯಂತ ಮನೋಹರವಾಗಿರುವುದು. ಮಾನುಷಹೃದಯದಲ್ಲಿ ನಡೆಯುವ ಸೂಕ್ಷ್ಮವ್ಯಾಪಾರಗಳು ಅತಿ ಪರಿಷ್ಕಾರವಾಗಿ ವಿವರಿಸಲ್ಪಟ್ಟಿವೆ. ಮೂಲಗ್ರಂಥಕರ್ತರಾದ ಶ್ರೀಸ್ವರ್ಣಕುಮಾರೀದೇವಿಯವರು ಬಂಗಾಳಾ ದೇಶದಲ್ಲೊಬ್ಬ ಪ್ರಸಿದ್ಧಗೊಂಡಿರುವ ಉಪನ್ಯಾಸಲೇಖಕರಾಗಿದ್ದಾರೆ. ಆ ದೇಶದಲ್ಲಿ ಅವರ ಗ್ರಂಥಗಳು ಹೇರಳವಾಗಿ ಪ್ರಚುರಗೊಂಡಿವೆ— ಇತಿ.

ಬಿ. ವೆಂಕಟಾಚಾರ್ಯ

## OPINION.

It (Malati) is a sweet short story simply told—*Indian Mirror.*

An excellent novelette in which, within a short compass, are vividly portrayed some of the subtlest workings of the heart—*Hindu Patriot.*

ಶ್ರೀಃ



ಶ್ರಿಯೈನಮಃ

# ಮಾಲತೀ.

## ಮೊದಲನೆಯ ಪರಿಚ್ಛೇದ

ದಿಗಂತವಾಗಿ ಪಸರಿಸಿ ಬೈಲಾಗಿದ್ದ ಸಮಭೂಮಿಯಲ್ಲಿ ಮರಳುಮಯವಾದೊಡಲ ಅಂಚನ್ನು ಚುಂಬನ ಮಾಡುತ್ತ ಸುಖಮಯಿ ನದಿಯು ಹರಿದು ಹೋಗುತ್ತಿದ್ದಿತು. ನದಿಯ ತೀರದಲ್ಲಿ ರಮ್ಯವಾದೊಂದು ಉಪವನದಲ್ಲೊಂದು ಅಚ್ಚುಕಟ್ಟಾದ ವಾಟಿಕೆ - ಅಲ್ಲಲ್ಲಿ ಕುಳಿತುಕೊಳ್ಳುವುದಕ್ಕೆ ಮಾಡಿದ್ದ ಉಚ್ಚಾಸನಗಳು. ಪ್ರಶಸ್ತವಾದೊಂದು ಪ್ರಸ್ತರಾಸನಕ್ಕೆ ಎರಡು ಕಡೆಗಳಲ್ಲಿಯೂ ಮಾಲತಿಲತೆಯು ಹಬ್ಬಿದ್ದ ಎರಡು ಪಾರಿಜಾತಮರಗಳು. ಆ ಕಲ್ಲಿನಮೇಲೆ ಇಬ್ಬರು ಕುಳಿತುಕೊಂಡು ಮಾತಾಡುತ್ತಿದ್ದರು. ಆಕಾಶದಲ್ಲಿ ಚಂದ್ರೋದಯವಾಗಿದ್ದಿತು. ಚೌತಿಯ ಚಂದ್ರನು, ನಿರಾಶೆಯಾದ ಹೃದಯದಲ್ಲಿ ಅಲ್ಪವಾದ ಆಶೆಯು ನೆಲೆಗೊಂಡಿದ್ದಂತೆ, ಗಗನಪ್ರಾಂಗಣದಲ್ಲಿ ನೆಲೆಗೊಂಡು ಮಲಿನವಾದ ಬೆಳದಿಂಗಳನ್ನು ಸಣ್ಣ ಸಣ್ಣ ಧಾರೆಯಾಗಿ ಬೀರಿದರೂ ಬೀರಲಸಮರ್ಥನಾಗಿದ್ದವನಂತೆ ಕಾಣುತ್ತಿದ್ದನು; ಆ ಬೆಳದಿಂಗಳು ನದಿಯಮೇಲೆ ಬಿದ್ದು ಪ್ರವಾಹವನ್ನು ಸ್ವಲ್ಪ ಪ್ರಕಾಶಗೊಳಿಸುತ್ತಲೂ,

ಅರಳಿದ್ದ ಮಾಲತಿ ಪುಷ್ಪಗಳನ್ನು ಮತ್ತಷ್ಟು ಅರಳಿಸುತ್ತಲೂ ಮಾಲತಿಯ ಮುಖದಮೇಲೆ ಬಿದ್ದು ಬೆಳಗುತಲೂ ಇದ್ದಿತು. ಮಾಲತಿಯು ಹದಿನಾರು ವರ್ಷದ ಬಾಲೆ, ಮುಗುಳುನಗೆಗೂಡಿದ ಅಲವರ್ಗಿಗ್ಗ, ಜೊನ್ನೆಯ ಜೊಂಪಲ ಬೊಂಬೆ-ಮಾಲತಿಯು ಮಾತಾಡುತ್ತಿದ್ದ ಹಾಗೆ ಒಂದೊಂದು ತಡವೆ ಆಕಾಶದಲ್ಲಿದ್ದ ಚಂದ್ರನನ್ನು ನೋಡುವಳು, ಒಂದೊಂದು ತಡವೆ ಬೆಳದಿಂಗಳಲ್ಲಿ ಬೆಳಗುತ್ತಿದ್ದ ಹೊಳೆಯಲ್ಲಿ ತಂಡತಂಡನಾಗಿ ಎದ್ದು ಕುಣಿದಾಡುತ್ತಿದ್ದ ಅಲೆಗಳ ಮಾಲೆಗಳನ್ನು ನೋಡುವಳು; ಹೀಗೆ ಕಣ್ಣುಗೊಳದಾದವುಗಳನ್ನು ನೋಡುತ್ತ ಕಡೆಗೆ ಸಂಜೆಯ ಸ್ಪಾಗಾಳಿಗೆ ತೂಗಾಡುತ್ತಿದ್ದ ಮಾಲತಿಲತೆಯಿಂದ ಒಂದೆರಡು ಹೂವುಗಳನೆತ್ತಿ ಅವುಗಳನ್ನು ನೋಡಿ ನಗುತ್ತ, 'ಅಣ್ಣಾ ! ಇನ್ನುಳಿದಿರುವುದು ಹತ್ತು ದಿನವಾದರೂ ಎಷ್ಟೋ ವರ್ಷಗಳಿರುವಂತೆ ತೋರುತ್ತದೆ' ಎಂದಳು.

ಹರುಷದಿಂದ ಅರಳಿದ್ದ ಯುವಕನ ಮುಖವು ಮತ್ತಷ್ಟು ಅರಳಿ ಸ್ವಲ್ಪ ಕೆಂಬಣ್ಣವತಾಳ್ದು ತೋರಿದ ನಗೆಮೊಗದಿಂದಲೇ ಮಾಲತಿಯು ಹೇಳಿದ ಮಾತಿಗೆ ಉತ್ತರವನ್ನು ಕೊಟ್ಟಂತಾಯಿತು. ಮಾಲತಿಯು ತನ್ನ ಗುಲಾಬಿಯ ಬಣ್ಣವುಳ್ಳ ಮುಖವನ್ನು ತಿರಿಗಿಸಿ ನಗುತನಗುತ, "ಅಣ್ಣಾ ! ನಾವಿಬ್ಬರೇ ಈಗಿರುವವರು ; ಶೋಭನೆಯೂ ಬಂದರೆ ಮತ್ತೊಬ್ಬಳು ಬಂದಂತಾಗಾಗುವುದು--ಹಗಲು ನೀನು ಕೆಲಸಕಾರ್ಯದಮೇಲೆ ಹೋದಾಗ ನಾನೊಬ್ಬಳೇ ಇದ್ದಂತಾಗುವುದಿಲ್ಲ" ಎಂದಳು.

ಯುವಕನು ಬ್ಯಾರಿಸ್ಟರು; ಆದರೆ ಲಾಯರ ಕೆಲಸದಲ್ಲಿ ಸಂಪಾದಿಸಲಾರದೆ ಮನಸೋಪ್ಪಿ ಕೆಲಸಕೈಕೊಳ್ಳಿಕೊಂಡು ಪಟ್ಟಣವಾಸವನ್ನು ಬಿಟ್ಟು ಹಳ್ಳಿಯೂರಲ್ಲಿರುತ್ತಿದ್ದನು. ಹುಡುಗಿಯ ಮಾತಿಗೆ ನಕ್ಕು, 'ಮಾಲತಿ ! ಅದುಸಲವಾಗಿಯೇ ನಿನಗಿಷ್ಟು ಸಂತೋಷವೆಂದು ತೋರುತ್ತದೆ' ಎಂದನು.

ಮಾಲತಿಯು ಸ್ವಲ್ಪ ನಾಚಿಕೊಂಡವಳಾಗಿ, 'ಇಲ್ಲ, ಅಣ್ಣಾ! ಹಾಗಲ್ಲ; ನಾನು ಶೋಭನೆಯನ್ನು ಎಷ್ಟೊಂದು ಪ್ರೀತಿಸುತ್ತೇನೆಯೋ ಅದನ್ನು ನೀನರಿಯೆ' ಎಂದಳು.

ಯುವಕನು ಅವಳನ್ನು ಕಾಣದಲೇ ಅವಳಮೇಲೆ ಅಷ್ಟೊಂದು

ಪ್ರೀತಿಯು ಹುಟ್ಟಿದ ಬಗೆ ಹೇಗೆ? ಸ್ವಪ್ನದಲ್ಲಿಯೇ ನಿನಗೆಲ್ಲಿರ ಪರಿಚಯದಿಂದ ಪ್ರೀತಿಯು ಹುಟ್ಟುವಂತಿದೆಯಲ್ಲವೆ?

ಮಾಲತಿ--ನಾನವಳನ್ನು ನೋಡದಿದ್ದರೇನು? ಅವಳ ವಿಚಾರವೆಲ್ಲಾ ನಿನ್ನಿಂದ ಕೇಳಿದ್ದೇನೆ-ಅದರಿಂದಲೇ ಅವಳ ಮೇಲೆ ಅಷ್ಟೊಂದು ಅಂತಃಕರಣವು ಹುಟ್ಟಿದೆ-ಅವಳನ್ನು ನೋಡಬೇಕೆಂದು ಎಷ್ಟೋ ಆಶೆ-ಅಣ್ಣಾ! ಮದುವೆಗೆ ಮುಂಚೆ ಒಂದುದಿನ ನಾನವಳನ್ನು ನೋಡುವುದಕ್ಕಾಗಲಾರದೆ? ನನ್ನನ್ನು ಒಂದುದಿನದ ಮಟ್ಟಿಗೆ ಕಲಿಕತ್ತೆಗೆ ಸಂಗಡ ಕರೆದುಕೊಂಡು ಹೋಗಬಾರದೆ?

ಯುವಕ--ರೇಯಿಲುಬಂಡಿಯಲ್ಲಿ ಅಷ್ಟುದೂರ ಪ್ರಯಾಣಮಾಡುವುದು ಬಹಳ ಕಷ್ಟ; ಇಲ್ಲವಾದರೆ, ನೀನಷ್ಟೊಂದು ಕೇಳಿಕೊಳ್ಳಬೇಕೆ? ಶೋಭನೆಯೂ ನಿನ್ನನ್ನು ನೋಡಬೇಕೆಂದು ಅನೇಕ ತಡವೆ ಹೇಳಿದಳು.

ಮಾಲತಿ—ಅಣ್ಣಾ! ಹಾಗಾದರೆ ಅವಳಿಗೂ ನನ್ನಮೇಲೆ ಅಷ್ಟು ಪ್ರೀತಿಯೆ?

ಯುವಕನ ಉತ್ತರವನ್ನದುದು ನೋಡದೆ ನಿಟ್ಟುಸುರನ್ನು ಬಿಟ್ಟು, ಬಾಲೆಯು ಪುನಃ, 'ನೋಡು, ಅಣ್ಣಾ! ಅಮ್ಮನು ಹೋದಳು, ನೀನು ಪಿಲಾಯಿತಿಗೆ ಹೊರಟುಹೋದೆ—ನಾನೊಬ್ಬಳೇ ಒಬ್ಬಳು—ಅರಿಯದವಳು—ಆಗ ಪಟ್ಟಕಷ್ಟವನ್ನು ನಾನು ಬಲ್ಲೆನು-ಚಿಕ್ಕಮ್ಮನು ನನ್ನನ್ನು ಆದರಿಸುತ್ತಿದ್ದಳು-ಆದರೂ ಮನಸ್ಸಿಗೆ ಇಂಪಿಲ್ಲ—ಜತೆಗಾರರು ಇಲ್ಲದಿದ್ದರೆ ಪ್ರಾಣವುಳಿಯುವ ಬಗೆ ಹೇಗೆ? ಆಗ ಶೋಭನೆಯು ಸಂಗಾತಿಯಾಗಿದ್ದರೆ ಹೇಗಿರುತ್ತಿದ್ದಿತೋ! ಬಳ್ಳಿಯದು. ಅಣ್ಣಾ! ಅವಳನ್ನು ನೀನು ಮೊದಲು ನೋಡಿದುದೆಲ್ಲಿ?' ಎಂದಳು.

ಯುವಕ—ನಿನಗೆಷ್ಟು ತಡವೆ ಹೇಳಲಿ?

ಮಾಲತಿ - ಮರತೆ! ಸೋಮದತ್ತಮಾನಂದಿರ ಮನೆಯಲ್ಲಿ ಊಟಕ್ಕೆ ಹೋಗಿದ್ದಾಗ ನೋಡಿದ್ದುದು—ನಾನು ಅಲ್ಲಿಗೆ ಬಂದಿರಲಿಲ್ಲ-ಬಂದಿದ್ದರೆ ನೀನವಳನ್ನು ನೋಡಿದಾಗ ಹೇಗಿದ್ದೆಯೋ ನಾನದನ್ನು ನೋಡುತ್ತಿದ್ದೆನು. ಆಹಾ! ಮದುವೆಯಾದಾಗ ಆದೀತೋ? ಮತ್ತೆಷ್ಟು ದಿವಸಕ್ಕೆ? ಆಗ

ನನ್ನಾನಂದಕ್ಕೆ ಪಾರವೇ ಇರದು. ನೀನು ಹೊರಗೆ ಹೋದಾಗ ನಾವಿಬ್ಬರೂ ನಮ್ಮ ತೋಟದಲ್ಲಿ ತಿರುಗಾಡುತ್ತಿರುವೆವು—ತೋಟದ ಹೂವೆಲ್ಲಾ ಅವಳಿಗೆ ಮುಡಿಸಿ ನೀನು ಮನೆಗೆ ಬರುತ್ತಲೇ ಪರಮಸುಖಿಯಾಗುವಂತೆ ಮಾಡುವೆನು-ನಾವಿಬ್ಬರೂ ಬೇಕಾಗುದುನ್ನೆಲ್ಲಾ ಕುರಿತು ಮಾತಾಡುತ್ತಿರುವೆವು.

ಯುವಕ-ನೀನು ಇಂದಿನಿಂದಲೇ ಆನಂದವನೆಲ್ಲಾ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಸಂತೋಷಪಡುವಂತಿದೆ-

ಮಾತಾಡುತ್ತಿದ್ದಹಾಗೆ ಹುಡುಗಿಯು ಸುಮ್ಮನಾದಳು. ಅವಳ ಅರಳಿದ್ದ ಮುಖವು ದುಃಖದಿಂದ ಬಾಡಿತು. ಯುವಕನ ಮಾತಿಗೆ ಕಿವಿಗೊಡದೆ ಮಾಲತಿಯು ನಿಟ್ಟುಸುರನ್ನು ಬಿಟ್ಟು, "ಅಣ್ಣಾ! ಆಹಾ! ಅಮ್ಮನೀಗ ಬದುಕಿದ್ದರೆ ಈ ಮದುವೆಯಲ್ಲಿ ಎಷ್ಟೊಂದು ಆನಂದಿಸುತ್ತಿದಳೋ!" ಎಂದು ಹೇಳಿದಳು.

ಯುವಕನೂ ಆ ಮಾತಿಗೆ ವ್ಯಸನಪಟ್ಟುಕೊಂಡು ಅವದೋ ಭಾವಾಂತರದಲ್ಲಿದ್ದವನು, 'ಇದ್ದಿದ್ದಹಾಗೆ, ಅವಳು ಬದುಕಿದ್ದರೆ, ಈ ಮದುವೆಯಾಗುತ್ತಿದ್ದಿತೆ?' ಎಂದುಹೇಳಿದನು.

ಹುಡುಗಿಯು ಆಶ್ಚರ್ಯಪಟ್ಟು ಕೌತೂಹಲದಿಂದ, 'ಅವಳು ಬದುಕಿದ್ದರೆ ಈ ಮದುವೆಯಾಗುತ್ತಿರಲಿಲ್ಲವೇಕೆ?' ಎಂದು ಕೇಳಿದಳು.

ಯುವಕನು ಸುಮ್ಮನಾಗಿ ಗಂಭೀರಭಾವವನ್ನು ತಾಳಿದನು, ಪ್ರಶ್ನೆಗೆ ಪ್ರತ್ಯುತ್ತರವನ್ನು ಕೊಡಲಿಲ್ಲ.

ಹುಡುಗಿಯು, 'ಅಣ್ಣಾ! ತಾಯಿಯು ಬದುಕಿದ್ದರೆ ಈ ಮದುವೆಯಾಗುತ್ತಿರಲಿಲ್ಲವೇಕೆ?' ಎಂದು ಪುನಃ ಕೇಳಿದಳು.

ಯುವಕನು ಹಿಂದು ಮುಂದು ನೋಡುತಿದ್ದು ಬಳಿಕ, ಅವಳು ಬದುಕಿದ್ದರೆ ತಾನು ವಿಲಾಯಿತಿಗೆ ಹೋಗುತ್ತಿರಲಿಲ್ಲವೆಂದೂ ಇಷ್ಟು ದಿನಗಳ ತನಕ ತನಗೆ ಮದುವೆಯಾಗದಿರುತ್ತಿರಲಿಲ್ಲವೆಂದೂ ಹೇಳಿದನು,

ಮಾಲತಿ—ಅದೇಕೆ? ಅಮ್ಮನು ನಿನ್ನನ್ನು ವಿಲಾಯಿತಿಗೆ ಕಳುಹುದಾಗಿ ಹೇಳಿದ್ದಳಲ್ಲವೆ? ನಿಜವಾಗಿ ನೀನೆನಗೆ ಸಂಗತಿಗಳನ್ನೆಲ್ಲಾ ಹೇಳಿಲ್ಲ-ಅನೇಕ ಮಾತುಗಳನ್ನು ಮರೆಮಾಚಿರುತ್ತಿ-

ಯುವಕನು ಸ್ಥಿರಗಂಭೀರಭಾವವನ್ನು ತಾಳಿ ಮೆಲ್ಲಮೆಲ್ಲನೆ, "ಮಾಲತಿ! ನೀನೀಗ ದೊಡ್ಡವಳಾದೆ. ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳಬಲ್ಲೆ, ನಿಜವಾಗಿ ಇದುವರೆಗೂ ಒಂದು ಸಂಗತಿಯನ್ನು ನಿನಗೆ ಹೇಳದೆ ಮರೆಮಾಚಿದ್ದೆನು, ಈಗದನ್ನು ಬಿಚ್ಚಿ ಹೇಳುವೆನು—ಮಾಲತಿ ! ನೀನೆನಗೆ ಸೋದರಿಯಲ್ಲ' ಎಂದನು.

ಮಾಲತಿಯು ರಮೇಶನಿಗೆ ಸೋದರಿಯಲ್ಲ! ಹಾಗಾದರೆ ಈ ಪ್ರಪಂಚದಲ್ಲಿ ಮಾಲತಿಗೆ ಮತ್ತಾರೂ ಇಲ್ಲ ! ಪ್ರಪಂಚದಲ್ಲಿ ಯುವಕನೊಬ್ಬನು ಸಂಬಂಧವಟ್ಟ ಸೋದರನೆಂದು ತಿಳಿದಿದ್ದಳು. ಅವನು ಅಣ್ಣನಲ್ಲವೆಂದು ಹೇಳಿದ ಮಾತು ಅವಳೆದೆಯಲ್ಲಿ ಸಿಡಿಲು ಬಿದ್ದಂಗಾಯಿತು. ಯುವಕನು ಪುನಃ ಹೇಳತೊಡಗಿದನು:--"ಮಾಲತಿ ! ನೀನು ಅಮ್ಮನ ಗೆಳತಿಯ ಮಗಳು; ನಿನಗೆ ಒಂದು ವರ್ಷವಾಗಿದ್ದಾಗ ಗಂಡನಿಲ್ಲದ ನಿನ್ನ ತಾಯಿಯು ಸತ್ತುಹೋದಳು; ಅಮ್ಮನು ನಿನ್ನನ್ನು ತನ್ನ ಮಗಳಂತೆ ಸಾಕಿದಳು; ಆಗೆನಗೆ ಏಳುವರ್ಷ— ಅವೆಲ್ಲಾ ಚೆನ್ನಾಗಿ ನೆನವಿದೆ; ನಿನ್ನನ್ನು ನನಗೆ ಕೊಟ್ಟು ಮದುವೆ ಮಾಡಬೇಕೆಂದು ಅಮ್ಮನು ಯೋಚಿಸಿದ್ದಳು: ಅದುಕಾರಣ ಅಮ್ಮನು ಬದುಕಿದ್ದರೆ ಈ ಮದುವೆಯಾಗುತ್ತಿರಲಿಲ್ಲವೆಂದು ಹೇಳದೆನು" ಎಂದು ಹೇಳಿದನು. ಅವಳಿಗಾ ಮಾತುಗಳೆಲ್ಲಾ ಕಿವಿಗೆ ಬೀಳಲಿಲ್ಲ. ಅವಳಿಗೆ ನಾಲ್ಕೂಕಡೆಯಲ್ಲಿ ಕತ್ತಲೆಯು ಕವಿತುಕೊಂಡಂತಾಯಿ ಅಸದಳ ವಾವಾವದೋ ಒಂದು ವೇದನೆಯಿಂದ ಅವಳ ಹೃದಯವು ಅದುರಿತು. ಅದಕ್ಕೆ ಕಾರಣವನ್ನು ಅವಳರಿಯಲಾರದವಳಾಗಿದ್ದಳು.

ಅಂಧಕಾರದಲ್ಲಾವವನ್ನು ಬೆಳಕೆಂದು ತಿಳಿದಿದ್ದಳೋ ಪ್ರಪಂಚದಲ್ಲಿ ತನಗೆ ಮತ್ತಾರು ಇಲ್ಲದಿದ್ದರೂ ಅಣ್ಣನೊಬ್ಬನಿದ್ದು ಎಲ್ಲರೂ ಇದ್ದಂತೆ ತಿಳಿದಿದ್ದಳೋ ಆರನ್ನು ತನ್ನ ಪ್ರಾಣಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳೋ— ಅಂಥವನು ತನ್ನ ಅಣ್ಣನಲ್ಲ, ಅವನು ತನಗೇನೂ ಆಗತಕ್ಕವನಲ್ಲ— ಅವನಿಗೂ ತನಗೂ ಆವ ಸಂಬಂಧವೂ ಇಲ್ಲ! ಅವನು ಪ್ರೀತಿಸುವುದಕ್ಕೆ ಕಾರಣವೂ ಇಲ್ಲ! ಈ ಪ್ರಪಂಚದಲ್ಲಿ ಮಾಲತಿಯು ಅನಾಥೆಯಾದ ಬಾಲೆ— ರಮೇಶನ ಸ್ನೇಹಕ್ಕೆ ಅವಳು ಪಾತ್ರಿಯಲ್ಲ—ಅವನ ಕೃಪೆಗೆ ಪಾತ್ರಿಯಾಗಿ

ಅವನ ಆಪ್ರಿತೆ ಮಾತ್ರವಾಗಿದ್ದಳೇ ಹೊರ್ತು ಅವರವರಿಗೆ ಪರಸ್ಪರ ರಕ್ತಸ ಬಂಧವಾವದೂ ಇಲ್ಲ—ಈ ಕಾರಣಗಳಿಂದಲೂ ಅವಳ ಹೃದಯದಲ್ಲಿ ವ್ಯಥೆಯುಂಟಾಗಿರಬಹುದು. ಆದರೆ ಆ ಕಾರಣಗಳೆಲ್ಲಾ ಅವಳ ಮನಸ್ಸಿಗೆ ಹೊಳೆಯಲಿಲ್ಲ. ತನಗೇನು ಕಷ್ಟಬಂದಿತೋ ರಮೇಶನು ನುಡಿದ ದುಃಖಕರ ವಾದ ಮಾತುಗಳಾವವ್ರೋ, ಅವಾವ್ರೂ ಅವಳಿಗೆ ಗೊತ್ತಾಗಲಿಲ್ಲ. ಅಕಾರಣ ವಾಗಿ ಮರ್ಮವನ್ನು ಭೇದಿಸುವ ತೀವ್ರವಾದಾವದೋ ಒಂದು ಯಾತನೆಯು ಅವಳ ಹೃದಯವನ್ನು ಪೀಡಿಸುತ್ತಿದ್ದಿತು.

ನೋಡುತ್ತಿದ್ದ ಹಾಗೆ ಬಿಳಿಯ ಚಂದ್ರನು ಮೇಘದಲ್ಲಿ ಮುಚ್ಚಿ ಹೋದನು—ಉದ್ಯಾನವನ್ನೂ ನದಿಯನ್ನೂ ಪೃಥ್ವಿಯನ್ನೂ ಅವುಗಳೊಂದಿಗೆ ಚಿರಹಾಸ್ಯಮಯಿಯಾಗಿದ್ದಾ ಮಾಲತಿಯ ಹೃದಯವನ್ನೂ ಅಂಧಕಾರದಿಂದ ಮುಚ್ಚಿ ಚಂದ್ರನು ಅಸ್ತಮಿತನಾದನು. ಹುಡುಗಿಯು ದುಃಖಾತಿಶಯ ದಿಂದ ಜ್ಞಾನವಿಲ್ಲದವಳಂತೆ ಮೌನವಾಗಿ ಅಳುವುದಕ್ಕೆ ತೊಡಗಿದಳು.

ರಮೇಶನು ಅವಳ ಮನದ ಭಾವವನ್ನು ತಿಳಿದವನಾಗಿ, 'ಮಾಲತಿ! ಅಳುವುದೇಕೆ? ನೀನೆನಗೆ ಸೋದರಿಯಾಗದಿದ್ದರೂ ತಂಗಿಯಾಗಿರುತ್ತೀ, ನಾನು ನಿನಗೆ ಸೋದರನಾಗದಿದ್ದರೂ ಅಣ್ಣನಾಗಿದ್ದೇನೆ, ನಿನಗೂ ನನಗೂ ಸಂಬಂಧವಿಲ್ಲದಿದ್ದರೂ ಚಿಕ್ಕಂದಿನಿಂದ ಬೆಳದುಬಂದ ಸ್ನೇಹವಾವಾಗಲೂ ಹೋಗದು, ಅದು ಸಾಯುವತನಕ ಹೃದಯದಲ್ಲಿ ಬದ್ಧಮೂಲವುಳ್ಳದು ದಾಗಿರುವುದು, ನೀನೆನಗೆ ಸಹೋದರಿಯಾಗಿದ್ದರೂ ನಾನೀಗ ನಿನ್ನನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಪ್ರೀತಿಸುತ್ತಿರಲಿಲ್ಲ, ಈಗ ನಿನ್ನ ಮೇಲಿ ರುವ ನನ್ನ ವಿಶ್ವಾಸವು ಶುದ್ಧವಾದುದು, ಎಂದಿಗೂ ವಿಚ್ಛೇದವಾಗತಕ್ಕು ದಲ್ಲ, ದೇವತೆಗಳಲ್ಲಿಯೂ ಅಂತಹ ವಿಶ್ವಾಸವು ದುರ್ಲಭವಾದುದು' ಎಂದು ಹೇಳಿದನು.

ಮಾಲತಿಯು ಕಣ್ಣೀರಸ್ರೊರಸಿದನು. ದುಃಖಮಯವಾಗಿದ್ದ ಮಾಲ ತಿಯ ಮೂರ್ತಿಯು ಪುನಃ ಪ್ರಫುಲ್ಲವಾಯಿತು. ಮಾಲತಿಗೆ ಮತ್ತೇನು ಬೇಕಾಗಿದ್ದಿತು? ಮೊದಲಿನ ಸ್ನೇಹ—ಮೊದಲಿನ ಮಮತೆ—ಅವಳಿಗೆ ಮತ್ತಾ ವದರ ದುಃಖ!

# ಎರಡನೆಯ ಪರಿಚ್ಛೇದ.

ಎರಡು ಮೂರು ವರ್ಷಗಳು ಕಳೆದುಹೋದುವು. ಕಾರ್ಯರೂಪವಾದ ಹೆಜ್ಜೆಪಾಡನ್ನು ಪ್ರತಿಯೊಬ್ಬ ಮನುಷ್ಯನ ಜೀವನದ ಮಾರ್ಗದಲ್ಲಿಯೂ ಗುರುತುಮಾಡಿ, ಆ ಎರಡು ಮೂರು ವರ್ಷದ ಕಾಲವು ಅತೀತದ ರಾಜ್ಯದಲ್ಲಿ ಅಂತರ್ಧಾನವಾಗಿ ಹೋಯಿತು.

ಸೊಗಸಾಗಿ ಅಲಂಕರಿಸಲ್ಪಟ್ಟಿದ್ದ ಕೊಠಡಿಯಲ್ಲಿ ವಿಧವಿಧವಾದ ದೀಪಗಳು ಉರಿಯುತ್ತ ಬೆಳಕಾಗಿದೆ. ಶೋಭನೆಯು ಕಲ್ಲಿನ ಮೇಜಿನ ಬಳಿ ಇದ್ದ ಒಂದು ಸೋಫಾಮೇಲೆ ಕುಳಿತುಕೊಂಡು ಜಪಾನ ದೇಶದ ಪಾನದಾನದಿಂದ ಚಿಗುರು ವೀಳ್ಯದೆಲೆಯನ್ನು ತೆಗೆದು ಗಂಡನಿಗೋಸ್ಕರ ಮಡಿಸುತ್ತಾಳೆ. ಪಾರ್ಶ್ವದಲ್ಲಿ ಮತ್ತೊಂದು ಸೋಫದಮೇಲೆ ರಮೇಶನು ಅರ್ಧಶಾಯಿತನಾಗಿ ಒರಗಿಕೊಂಡು ಸಂಸ್ಕೃತದ ರತ್ನಾವಳಿ ನಾಟಕವನ್ನು ಓದುತ್ತ ಹೆಂಡತಿಗೆ ಅದರ ಅರ್ಥವನ್ನು ಹೇಳುತ್ತಾನೆ. ರಮೇಶನು ವಿಲಾಯಿತಿಯಿಂದ ಹಿಂದಿರಿಗಿ ಬಂದವನಾದರೂ ಸಂಸ್ಕೃತಾಭ್ಯಾಸವನ್ನು ಬಿಟ್ಟಿರಲಿಲ್ಲ. ಶೋಭನೆಯು ವೀಳ್ಯವನ್ನು ಸಿದ್ಧಪಡಿಸಿದುದಾಯಿತು. ಕೈಯನ್ನು ತೊಳೆದುಕೊಂಡು ಗಲ್ಲದಮೇಲೆ ಕೈಯಿಟ್ಟುಕೊಂಡು ಗಂಡನನ್ನು ನೋಡುತ್ತ ರತ್ನಾವಳಿಯನ್ನು ಕೇಳತೊಡಗಿದಳು. ಓದುತ್ತಿದ್ದಹಾಗೆ ರಮೇಶನು, 'ಶೋಭನೆ! ಈ ದಿನ ಮಾಲತಿಯು ಎಲ್ಲಿ? ರತ್ನಾವಳಿಯನ್ನು ಕೇಳುವುದಕ್ಕೆ ಬರಲಿಲ್ಲ' ವೆಂದು ಹೇಳಿದನು.

ಶೋಭನೆಯು ಮೆಲ್ಲಮೆಲ್ಲನೆ ಬಿಸುಸುಯ್ದು ಮೃದುಸ್ವರದಿಂದ, 'ನಾನವಳನ್ನು ಕರೆತಂದು ಬಿಡಲೆ?' ಎಂದಳು,

ರಮೇಶ— ಬೇಡ, ಅವಳು ಎಲ್ಲಿಯೋ ಹೂವೆತ್ತುತ್ತಿರಬೇಕು, ಇಲ್ಲವಾದರೆ, ಹಕ್ಕಿಗೆ ಮಾತನ್ನು ಕಲಿಸುತ್ತಿರಬೇಕು, ಅಥವಾ ನದಿಯಲ್ಲಿ ದುಂಡುದುಂಡು ಕಲ್ಲುಗಳನ್ನು ಆರಿಸುತ್ತಿರಬೇಕು—ನೀನವಳನ್ನು ಎಲ್ಲೆಂದು ಹುಡುಕುಬಲ್ಲೆ? ತಾನಾಗಿಯೇ ಬರುವಳು.

ಯುವಕನು ಪುನಃ ಓದತೊಡಗಿದನು :—

"ದುಲ್ಲಹಜಣಅಣುರಾಅ ಲಜ್ಜಾ ಗುರುಈಪರವ್ವಸೋಅಪ್ಪಾ |
ಪಿಅಸಹಿ ವಿಸಮಂಪೆಮ್ಮಂ ಮರಣಂ ಸರಣಂ ಣವರಿಅಮೆಕ್ಕಂ ||

ಇಷ್ಟು ಓದಿ ಅದರ ಅರ್ಥವನ್ನು ಹೇಳುತ್ತಿದ್ದಾಗ ಅವನ ದೃಷ್ಟಿಯು ಶೋಭನೆಯಮೇಲೆ ಬಿದ್ದಿತು. ನೋಡಲಾಗಿ ಅವಳ ಕಣ್ಣುಗಳಲ್ಲಿ ಎರಡು ಬಿಂದು ಕಣ್ಣೀರು ಬಂದಿದ್ದಿತು. 'ಯುವಕನು, ಶೋಭನೆ! ಇದ್ದಹಾಗೆ ಪದ್ಮಸದೃಶ ನಯನದಲ್ಲಿ ಶಿಶಿರಶೋಭಾ! ಶ್ಲೋಕಾರ್ಥವು ಮನದಲ್ಲಿ ನಾಟಿದಂತಿದೆ' ಎಂದನು.

ಶೋಭನೆಯು ಬೆಚ್ಚಿ, ಆವ ಶ್ಲೋಕವೆಂದು ಕೇಳಿದಳು.

ಶೋಭನೆಯು ಶ್ಲೋಕವನ್ನು ಕೇಳುತ್ತಿರಲಿಲ್ಲ. ಅನ್ಯಮನಸ್ಕಳಾಗಿ ಬೇರೆ ಚಿಂತೆಯಲ್ಲಿ ಮುಳುಗಿದ್ದಳು. ಯುವಕನು ಓದುವುದು ಮುಂದಕ್ಕೆ ಸಾಗಲಿಲ್ಲ. ಪುಸ್ತಕವನ್ನು ಮುಚ್ಚಿಟ್ಟು ಶೋಭನೆಯನ್ನು ಹತ್ತಿರ ಎಳೆದುಕೊಂಡು, 'ಶೋಭನೆ! ನಿನ್ನ ಮೊದಲ ನಗುವೆಲ್ಲಿಹೋಯಿತು? ಮದುವೆಗೆ ಮೊದಲು ನಾನು ನಿಮ್ಮ ಮನೆಗೆ ಬಂದಿದ್ದಾಗ ನಿನ್ನ ಮುಖವು ಹರ್ಷದಿಂದ ಅರಳಿದ್ದಂತಿರುವುದು. ಈಚೆಗೆ ಆ ಭಾವವು ಕಾಣುವುದಿಲ್ಲವೇಕೆ? ನೀನು ಸರ್ವದಾ ವ್ಯಸನಾಕ್ರಾಂತೆಯಾಗಿರುವಂತೆ ತೋರುತ್ತದೆ. ಕೇಳಿದರೆ ಹೇಳುವುದಿಲ್ಲ. ಶೋಭನೆ! ನನ್ನನ್ನು ಮದುವೆಯಾದುದಕ್ಕೆ ಅನುತಾಪವೇನಾದರೂ ಹುಟ್ಟಿತೆ?' ಎಂದು ಕೇಳಿದನು.

ಶೋಭನೆಯು ಕಣ್ಣುಗಳಿಂದ ಧಾರೆಯಾಗಿ ನೀರು ಹರಿಯಿತು. ಅವಳು ಗದ್ಗದಸ್ವರದಿಂದ, 'ನನ್ನ ಸರ್ವಸ್ವನೆ! ನಿನ್ನನ್ನು ಮದುವೆಯಾಗಿ ನನಗೆ ಅನುತಾಪವೆ! ನಿನ್ನೊಂದಿಗೆ ನರಕವಾಸವೂ ಅನುತಾಪಕ್ಕೆ ಕಾರಣವಾಗದು! ಅದೂ ನನ್ನ ಪಕ್ಷಕ್ಕೆ ಸ್ವರ್ಗವಾಗಿರುವುದು! ನಿನ್ನನ್ನು ಮದುವೆಯಾದುದಕ್ಕೆ ನನಗೆ ಅನುತಾಪವುಂಟೆ? ಆದರೆ:—

ಯುವಕ—'ಆದರೆ,' ಏನು? ಹೇಳು, ಶೋಭನೆ! ನಿನ್ನ ಭಾವವನ್ನು ನೋಡಿದರೆ ನನಗೆ ಉಂಟಾಗುವ ಯಾತನೆಯನ್ನು ನೀನು ತಿಳಿಯುವವಳಾದರೆ:—

ಮಾತು ಶೋಭನೆಯ ಮನಕೆ ತಟ್ಟಿತು, ಅವಳು ವ್ಯಥೆಯಿಂದ, 'ನನ್ನಿಂದೇನಾಗದೆಯೋ ನಾನದನ್ನು ಅರಿಯೆನು—ಆದರೆ ನನ್ನನ್ನು ಮದುವೆಯಾಗಿ ನೀವು ಸುಖ ಪಡಲಿಲ್ಲ' ವೆಂದಳು.

ಯುವಕ-ಶೋಭನೆ! ಅದು ಎಂತಹ ಮಾತು! ನಾನು ಅಸುಖಿಯಾಗಿದ್ದುದು ನಾನು ನಡೆಯಿಸಿದಾವ ಕಾರ್ಯದಿಂದ ಗೊತ್ತಾಯಿತು? ನಾನು ನುಡಿದಾವ ಮಾತಿನಿಂದ ಗೊತ್ತಾಯಿತು? ಅಥವಾ ನಾನು ತೋರಿದಾವ ಭಾವದಿಂದ ತಿಳಿದೆ?

ಶೋಭನೆಯು ತನ್ನ ಸೀರೆಯ ಸೆರಗನ್ನು ಎಡದಕೈಯಲ್ಲಿ ಹಿಡಿದುಕೊಂಡು ಬಲದ ಕೈಬೆರಳುಗಳಿಂದ ಸೆರಗಿನ ತುದಿಯ ನೂಲನ್ನು ಹುರಿಮಾಡುತ್ತ, ಮುಖತಗ್ಗಿಸಿಕೊಂಡು, ಮಧ್ಯಮಧ್ಯೆ ಉಗುಳನ್ನುಂಗುತ್ತ ಹೀಗೆಂದು ಹೇಳಿದಳು:-"ನಾಥ! ನನ್ನನ್ನು ಮದುವೆಯಾಗಿ ಸುಖಪಡುವುದಕ್ಕೆ ನನ್ನಲ್ಲಿ ಗುಣವೇನಿದೆ? ನಾನೇನು ರೂಪವಂತೆಯೆ? ಸಾಯುವತನಕ ನಿಂತು ನಳಯುವ ರೂಪವೇನಿದೆ? ರೂಪವಿಲ್ಲದಿದ್ದರೂ ಗುಣವಾದರೂ ಇದ್ದರೆ ಅದರಿಂದ ಮೋಹಗೊಳಿಸಬಹುದು. ಅಂತಹ ಗುಣವೂ ಇಲ್ಲ ಸ್ವಲ್ಪ ವಿದ್ಯೆಯಾದರೂ ಬಂದಿದ್ದರೆ, ನಿಮ್ಮ ಸಂಗಡ ಚತುರೆಯಾಗಿ ಮಾತಾಡಿ ನಿಮ್ಮ ಮನಸ್ಸನ್ನು ಸಂತೋಷಪಡಿಸಬಹುದಾಗಿದ್ದಿತು-ಅಂತಹ ವಿದ್ಯೆಯೂ ನನಗೆ ಇಲ್ಲ; ವಿದ್ಯೆವಿಲ್ಲದವಳ ಸಂಗಡ ಮಾತಾಡುವುದಕ್ಕಾರಿಗಾದರೂ ಬೇಸರವುಂಟಾಗುತ್ತದೆ-ನಿಮ್ಮಂತಹ ವಿದ್ಯಾವಂತರಿಗೆ ನಾನು ತಕ್ಕವಳೆ! ನಾನು ಪೆದ್ದುಹೆಣ್ಣು-ಬರೆದೋದುವುದರಲ್ಲಿ ನಿಮಗಾವ ಸಹಾಯ್ಯವಂ ಮಾಡಬಲ್ಲೆನು? ಈಡುಜೋಡಾದ ಹೆಂಡತಿಯಲ್ಲ-ಬೇಗನೆ ಓದು ಬರಹಗಳನ್ನು ಕಲಿತು ನಿಮಗೆ ಸಂತೋಷವುಂಟುಮಾಡಬೇಕೆನ್ನುವುದಕ್ಕೆ ಅಂತಹ ಸೂಕ್ಷ್ಮವಾದ ಬುದ್ಧಿಯೂ ಎನಗಿಲ್ಲ-ಆವ ಭಾಗದಲ್ಲಿಯೂ ನಿಮಗೆನ್ನಿಂದ ಸಹಾಯವಿಲ್ಲ ಆದಾಯವು ಮೊದಲೇ ಇಲ್ಲ ನಿಮಗೆ ಸಂಗೀತವನ್ನು ಕೇಳುವುದಕ್ಕೆ ಎಷ್ಟೊ ಆಶೆ. ನನ್ನ ಗ್ರಹಚಾರಕ್ಕೆ ನನಗಾವ ಸಂಗೀತವೂ ಬರದು-ಸರಿಯಾಗಿ ಎರಡು ಹಸೆಗೆ ಕರೆಯು ಹಾಡೂ ಬರದು-ನೀವಾವದನ್ನು ಕಂಡು ನನ್ನಲ್ಲಿ ವಿಶ್ವಾಸವುಳ್ಳವರಾಗಬೇಕು ರೂಪವಿಲ್ಲ, ಗುಣವಿಲ್ಲ, ವಿದ್ಯೆಯಿಲ್ಲ, ಬುದ್ಧಿಯಿಲ್ಲ ಆವುದರಲ್ಲಿಯೂ ನಿಮಗೆ ಯೋಗ್ಯೆಯಾದವಳಲ್ಲ—ಯೋಗ್ಯತೆಯು ಹಾಗಿರಲಿ—ಕಡೆಗೆ ನಿಮ್ಮ ಮನೆಯ ಕಸವನ್ನು ಗುಡಿಸುವವಳು ನಿಲ್ಲುವ ಸ್ಥಳದಲ್ಲಿ ನಿಲ್ಲುವುದಕ್ಕೂ ನಾನು ತಕ್ಕವಳಲ್ಲ. ನಾನು ತಮಗೆ ತಕ್ಕವಳಲ್ಲವೆಂದು ಪ್ರತಿನಿಮಿಷದ

ಲ್ಲಿಯೂ ವ್ಯಕ್ತವಾಗುತ್ತಿದೆ. ಮೊದಲು ಮೊದಲು, ರೂಪ, ಗುಣ, ವಿದ್ಯಾ ಬುದ್ಧಿ, ಅವಾವದಿಲ್ಲದಿದ್ದರೂ ನಾನು ಮಾಡುವ ಸೇವೆಯಿಂದಾದರೂ ತಮ್ಮ ಪ್ರೀತಿಗೆ ಪಾತ್ರಿಯಾಗಬೇಕೆಂದು ಯೋಚಿಸಿಕೊಂಡಿದ್ದೆನು; ಆದರೆ ಆ ಪ್ರೀತಿಗೂ ನಾನು ಭಾಗಿಯಾಗಿಲ್ಲ—ಅದು ನನ್ನ ಹಣೆಯಲ್ಲಿ ಬರೆದಿಲ್ಲ—

ರಮೇಶನು ಎಲ್ಲವನ್ನೂ ಮೌನವಾಗಿ ಕೇಳಿದನು. ಶೋಭನೆಯು ಹೇಳುವುದು ಪೂರೈಸಿದ ಬಳಿಕ, ಅವನು ಸ್ವಲ್ಪ ನಕ್ಕು, 'ಶೋಭನೆ! ನೀನು ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ನನಗೆ ಸಮಕಕ್ಷಿಯಲ್ಲವೆಂದು ಹೇಳಿದವರಾರು? ನೀನೀಗ ಹೇಳಿದ ವಿಷಯವಾಗಿ ಎಷ್ಟು ಮಂದಿ ಪುರುಷರು ನಿನ್ನಂತೆ ಭಾಷಣೆಯಂ(Lecture)ಮಾಡಬಲ್ಲರು? ನಿನ್ನ ರೂಪದ ವಿಚಾರದಲ್ಲಾದರೋ—ಅದನ್ನು ಕುರಿತು ವಿಚಾರಮಾಡತಕ್ಕವನು ನಾನು—ನೀನಲ್ಲ. ನಿನಗದು ಅಸಮಾಧಾನಕ್ಕೆ ಕಾರಣವಾಗಿದ್ದರೆ ಅಂತಹ ಅಸಮಾಧಾನಕ್ಕೆ ಕಾರಣವೇ ಇಲ್ಲ. ಶೋಭನೆ! ನಾನು ಹುಡುಗಾಟವಾಗಿ ಹಾಸ್ಯಕ್ಕೆ ಹೇಳುವುದಿಲ್ಲ. ರೂಪದಲ್ಲಿಯೂ ಗುಣದಲ್ಲಿಯೂ ಆವ ದೇವತೆಯೂ ನಿನಗೆ ಸಮನಲ್ಲ. ಅದನ್ನು ನಾನು ಬಲ್ಲೆನು. ಎಂತಹ ದೇವಿಯು ಸ್ವರ್ಗದಿಂದಿಳಿದು ಬಂದು ನಿಂತರೂ ನಿನಗೆ ಬದಲಾಗಿ ಅವಳನ್ನು ಸಾಟೀಮಾಡಿಕೊಳ್ಳಲಾರೆನು. ನೀನು ನನ್ನ ಹೃದಯೇಶ್ವರಿ ನಿನ್ನನ್ನು ಬಿಟ್ಟರೆ ನನಗೆ ಪ್ರಪಂಚವೇ ಬೇಕಾಗುವುದಿಲ್ಲ. ನೀನೆನಗೆ ಸರ್ವಸ್ವಳು. ನೀನೆನ್ನ ಸುಖದ ಪ್ರತಿಮೆ!' ಎಂದು ಮುಂತಾಗಿ ಹೇಳಿದನು.

ಹರುಷಾತಿಶಯದಿಂದ ಶೋಭನೆಯು ಬಾಯಲ್ಲಿ ಮಾತು ಹೊರಡಲಿಲ್ಲ. ಹಾಗಾದರೆ ಅವಳು ಹೇಳಿದುದೆಲ್ಲಾ ಮನಸ್ಸಿನ ಭ್ರಾಂತಿಯಿಂದ ಕಲ್ಪಿತವಾದುದೆ? ಶೋಭನೆಯು ಗಂಡನ ಪಾದುಗಳಿಗೆರಗಿ, ನಾನು ಪಾಪಿಷ್ಠೆ ನರಕದಲ್ಲಿಯೂ ನನಗೆ ಸ್ಥಾನವಿರದು; ಅದು ಕಾರಣ ತಮ್ಮಂತಹ ಸ್ನೇಹಪರಿಪೂರ್ಣರಾದ ಸ್ವಾಮಿಯಲ್ಲಿ ಸಂಶಯ ಮನಸ್ಸುಳ್ಳವಳಾದೆನು. ನನಗಾವ ಪ್ರಾಯಶ್ಚಿತ್ತವಾಗಬೇಕೋ ಅದನ್ನು ಹೇಳಲಾರೆನು. ಆದರೆ ಇಂದೆನ್ನ ಮನಸ್ಸನ್ನು ಬಿಚ್ಚಿ ಎಲ್ಲವನ್ನೂ ಹೇಳಬೇಕೆಂದು ಇರುವೆನಾದುದರಿಂದ ಬಾಯಿಬಿಟ್ಟು ಹೇಳಿಬಿಡುವೆನು. ನಾನು ಮೌನವಾಗಿ ಅನುಭವಿಸುವ ನರಕಯಾ

ತನೆಗಳನ್ನೆಲ್ಲಾ ಸ್ಪಷ್ಟವಾಗಿ ಹೇಳುವೆನು. ನನ್ನ ಅಪರಾಧವು ಕ್ಷಮಿಸತಕ್ಕು ದುದಾಗಿದ್ದರೆ ಕ್ಷಮಿಸಬಹುದು, ಇಲ್ಲವಾದರೆ ತಾವೇ ದಂಡಿಸಬಹುದು. ನನ್ನ ಪ್ರಾಣವು ತಮ್ಮ ಕೈಯಲ್ಲಿಗೆ, ನಾಥ! ನನ್ನ ಹೃದಯದಲ್ಲಿ ಅಗ್ನಿಯ ಜ್ವಾಲೆಯು ಉರಿಯುತ್ತದೆ. ದೇವರಂತಿರುವ ನಿಮ್ಮಂತಹ ಸ್ವಾಮಿಯನ್ನು ಪಡದಿದ್ದರೂ ನನ್ನ ಮನಸ್ಸಿನ ದೋಷದಿಂದ ನಾನು ಸುಖಪಡಲಾರದವಳಾಗಿ ದ್ದೇನೆ. ನೀವು ನನ್ನನ್ನು ಪ್ರೀತಿಸುವುದಿಲ್ಲವೆಂದು ನನ್ನ ಮನಸ್ಸಿಗೆ ತೋರು ತ್ತದೆ, ನೀವು ಮಾಲತಿಯನ್ನು--'ಎಂದು ಮುಂತಾಗಿ ಹೇಳುತ್ತಿದ್ದ ಶೋಭ ನೆಗೆ ಬಾಯಲ್ಲಿ ಮುಂದಕ್ಕೆ ಮಾತು ಹೊರಡಲಿಲ್ಲ. ಲಜ್ಜೆಯಿಂದಲೂ ಕಷ್ಟ ದಿಂದಲೂ ಅನುತಾಪದಿಂದಲೂ ಮಾತು ನಿಂತುಹೋಯಿತು.

ಯುವಕನು ಅವಳ ನುಡಿಗಳನ್ನು ಕೇಳಿ ಆಶ್ಚರ್ಯಪಟ್ಟನು. ಅವಳ ಮನಸ್ಸಿನ ಭಾವವು ಅವನಿಗೆ ಪೂರ್ತಿಯಾಗಿ ಗೊತ್ತಾಗಲಿಲ್ಲ. ಅವಳನ್ನು ಮೆಲ್ಲನೆ ಎಬ್ಬಿಸಿ, 'ಶೋಭನೆ! ಏನನ್ನು ಹೇಳಿದೆ? "ಮಾಲತಿಯನ್ನು" ಎಂದು ಹೇಳಿ ಸುಮ್ಮನಾದೆ— "ಮಾಲತಿಯನ್ನು" ಏನು?' ಎಂದು ಕೇಳಿದನು.

ಶೋಭನೆ—(ಮೆಲ್ಲಮೆಲ್ಲನೆ) ಪ್ರೀ-ತಿ-ಸು-ತ್ತೀ-ರಿ.

ಯುವಕ—(ಆಶ್ಚರ್ಯದಿಂದ) ಮಾಲತಿಯನ್ನು ಪ್ರೀತಿಸುತ್ತೇ ನೆಯೆ! ಅಯ್ಯೋ! ಕರ್ಮವೇ! ಮಾಲತಿಯೆನಗೆ ಒಡಹುಟ್ಟಿದವಳಾಗದಿ ದ್ದರೂ ಅವಳನ್ನು ನನ್ನ ತಂಗಿಯಂತೆ ಪ್ರೀತಿಸುತ್ತೇನೆ. ಅವಳನ್ನು ಚಿಕ್ಕಂ ದಿನಿಂದಲೂ ಪ್ರೀತಿಸುತ್ತಿದ್ದೇನೆ.

ಆ ಮಾತಿನಮೇಲೆ ಶೋಭನೆಗೆ ಮಾತಾಡಲು ಧೈರ್ಯವುಹುಟ್ಟಿ, ಒರಪಾದ ಸ್ವರದಿಂದವಳು, 'ಆ ಪ್ರೀತಿಯನ್ನು ಕುರಿತು ಹೇಳಲಿಲ್ಲ; ನನಗಿಂ ತಲೂ ಅವಳಲ್ಲಿ ಹೆಚ್ಚು ಪ್ರೀತಿ, ಪ್ರೇಮಪುರಸ್ಸರವಾದ ಒಲವು!' ಎಂದಳು.

ಪ್ರೇಮದ ಒಲವೆಯೆ! ಯುವಕನು ಮಾತಿಲ್ಲದವನಾದನು. ಅಷ್ಟು ಹೊತ್ತಾದ ಬಳಿಕ ಹೆಂಡತಿಯ ಮನಸ್ಸನ್ನು ಕಂಡುಹಿಡಿದನು. ಅತಿಕಷ್ಟದಿಂದ ಸ್ವಲ್ಪ ನಕ್ಕು, 'ಶೋಭನೆ! ಹಾಗಿದ್ದರೆ ಮಾಲತಿಯನ್ನು ಮದುವೆಮಾಡಿಕೊ ಳ್ಳಲಾರೆನಾಗಿದ್ದೆನೆ? ನಿನ್ನನ್ನು ಮದುವೆ ಮಾಡಿಕೊಂಡೆನೇಕೆ?' ಎಂದು ಹೇಳಿ ದನು.

ಶೋಭನೆ--ನೀವು ಮದುವೆ ಮಾಡಿಕೊಂಡಾಗ ನಿಮ್ಮ ಮನಸ್ಸು ನಿಮಗೆ ಗೊತ್ತಾಗಿರಲಿಲ್ಲ.

ಯುವಕ--ಆಗ ತಿಳಿಯದಿದ್ದರೆ ಈಗಲೂ ತಿಳಿದಿಲ್ಲ. ಮೊದಲು ಅವಳನ್ನು ಹೇಗೆ ಪ್ರೀತಿಸುತ್ತಿದ್ದೆನೋ ಈಗಲೂ ಹಾಗೇವೇ ಪ್ರೀತಿಸುತ್ತೇನೆ; ಆ ಪ್ರೀತಿಯು ತಂಗಿಯ ಮೇಲಿನ ವಿಶುದ್ಧವಾದ ಪ್ರೀತಿ; ಪ್ರಯಣದ ಪ್ರೀತಿಯಲ್ಲ.

ಶೋಭನೆ-ಪ್ರಣಯವು ಮನಸ್ಸಿನಲ್ಲಿ ಸ್ವಲ್ಪಸ್ವಲ್ಪವಾಗಿ ಹುಟ್ಟಿ ವೃದ್ಧಿಗೊಳ್ಳುತ್ತಿದ್ದರೆ ಅದು ನಮಗೆ ಗೋಚರವಾಗುವುದಿಲ್ಲ. ನಿಮ್ಮ ಮನಸ್ಸು ನಿಮಗೇವೇ ಗೊತಾಗುವುದಿಲ್ಲ. ನಾನದನ್ನು ತಿಳಿದುಕೊಳ್ಳಬಲ್ಲೆನು.

ಈ ಪ್ರಕಾರ ಸ್ಥಿರವಾಗಿದ್ದ ಹೆಂಡತಿಯ ಸಂದೇಹವು ಯುವಕನ ಮನಸ್ಸಿಗೆ ಚೆನ್ನಾಗಿ ತಟ್ಟಿತು. ಏನನ್ನು ಮಾಡಿದರೆ ಆ ಸಂದೇಹವು ಅವಳ ಮನಸ್ಸಿನಿಂದ ತೊಲಗುವುದೋ ಅದನ್ನರಿಯದೆ ಯುವಕನು,'ನಾನು ನಡೆಯಿಸಿರುವಾವ ಕೆಲಸದಿಂದ ನಿನಗೆ ಅಂತಹ ನಂಬಿಕೆಯುಂಟಾಯಿತು?' ಎಂದು ಕೇಳಿದನು.

ಶೋಭನೆ--ನಿಮ್ಮ ಮಾತುಗಳಿಂದಲೂ ನಿಮ್ಮ ಹಾವಭಾವದಿಂದಲೂ ನಿಮ್ಮ ನಡತೆಯಿಂದಲೂ ನಿಮ್ಮ ಎಲ್ಲಾ ಕೆಲಸಕಾರ್ಯಗಳಿಂದಲೂ ನಿಮ್ಮ ಮನಸ್ಸಿನಲ್ಲಿರುವುದು ಹೊರಪಡುತ್ತದೆ. ಪ್ರಣಯದ ಪ್ರವಾಹಕ್ಕೆ ಮಧ್ಯೆ ಅಡ್ಡಿಯು ಬಾರದಿದ್ದರೆ ಅಂತಹ ಪ್ರಣಯವು ಪೂರ್ಣತೆಯನ್ನು ಹೊಂದುವುದಿಲ್ಲ. ನಿಮ್ಮನಿಮ್ಮಲ್ಲಿ ಬಾಲ್ಯದಿಂದಲೂ ಹುಟ್ಟಿದ ಪ್ರಣಯವು ನಿಮ್ಮ ನಿಮ್ಮ ಸ್ನೇಹದ ಬಳಕೆಗಳಿಂದ ನಿಮಗೆ ಗೊತ್ತಾಗಲಿಲ್ಲ. ಆದುದರಿಂದ ನನ್ನನ್ನು ಪ್ರೀತಿಸುವುದಾಗಿ ತಿಳಿದುಕೊಂಡಿರುವಿರಿ. ಈಗೆನಗೆ ತಿಳಿದಂತೆ ನೀವು ಮಾಲತಿಯನ್ನೇ ಪ್ರೀತಿಸುತ್ತೀರಿ, ಅವಳಲ್ಲಿಯೇ ನಿಮಗೆ ಹೆಚ್ಚು ಪ್ರಣಯವು.

ಯುವಕ—(ಸ್ವಲ್ಪ ವಿರಕ್ತಿಭಾವದಿಂದ)ಶೋಭನೆ! ಪ್ರಣಯಕ್ಕೆ ಮಧ್ಯೆ ಅಡ್ಡಿಯು ಬಾರದಿದ್ದರೆ ಅದುಪಕ್ವವಾಗುವುದಿಲ್ಲವೆಂಬ ಅನೇಕರು ಹೇಳುವುದೇನೋ ನಿಜ--ನೀನೂ ಹಾಗೇ ಹೇಳುತ್ತಿ. ಮಾಲತಿಯನ್ನು ನಾನು ಪ್ರೀತಿಸುತ್ತೇನೆಂತಲೇ ಹೇಳು. ಆ ಪ್ರೀತಿಗೆ ಈಗ ಮಧ್ಯೆ ಬಾಧೆ ಬಂದುದೇನು? ಅದು ಪೂರ್ಣತೆಯನ್ನು ಹೊಂದಿರುವ ಬಗೆ ಹೇಗೆ?

ಶೋಭನೆ—ನನ್ನನ್ನು ಮದುವೆ ಮಾಡಿಕೊಳ್ಳುವುದೇ ಲಗ್ನಕ್ಕೆ ಬಾಧೆ ಬಂದಂತಾಯಿತು. ನಾನೇ ನಿಮ್ಮ ಹಾದಿಯಲ್ಲಿ ಮುಳ್ಳಾಗಿ ನಿಂತಿರುವೆನು!

ಆ ಮಾತನ್ನು ಹೇಳುತ್ತಿದ್ದ ಹಾಗೆ ಶೋಭನೆಗೆ ದುಃಖೋದ್ರೇಕವಾಗಿ ಮುಂದೆ ಮಾತು ಸಾಗದೆ ನಿಲ್ಲುತ್ತ ಬಂದಿತು. ಆ ವರೆಗೂ ಹೃದಯದಲ್ಲಿ ಬಚ್ಚಿಟ್ಟುಕೊಂಡಿದ್ದ ಯಾತನೆಯು ಉಕ್ಕಿ ಕಣ್ಣುಗಳಲ್ಲಿ ಹರಿಯಿತು. ಕಷ್ಟದಿಂದ ಕಣ್ಣೀರನ್ನು ಅಡಗಿಸಿಕೊಂಡು, ಪುನಃ ಹೇಳತೊಡಗಿದಳು, "ನಾಥ! ನಾನೇ ನಿಮ್ಮ ಹಾದಿಯಲ್ಲಿ ಮುಳ್ಳು; ಮದುವೆಯ ಪ್ರತಿಬಂಧಕಳು ನಾನು. ನಿಮ್ಮ ಜತೆಯಲ್ಲಿ ಮಾಲತಿಯು ಹೊರತು ಮತ್ತಾರೂ ಇರಲಿಲ್ಲ; ಮಾಲತಿಯು ಸಂಗಡಲೇ ಆವಾಗಲೂ ಮಾತುಕಥೆಯಾಡುತ್ತಿದ್ದಿರಿ. ಅವಳು ನಿಮ್ಮ ಸಂಗಾತಿಯಾಗಿರುವಳು. ಅದನ್ನು ಕಂಡು ಯಾರೂ ಆಡಿಕೊಳ್ಳುತ್ತಿರಲಿಲ್ಲ; ಯಾರ ಅಡ್ಡಿಯೂ ಇಲ್ಲದೆ ಮನದಣಿಯ ಮಾತಾಡುತ್ತ ಪರಸ್ಪರ ಸ್ನೇಹದಿಂದಿದ್ದಿರಿ. ಅದರಲ್ಲಿ ಸಂಕೋಚಕ್ಕೆ ಕಾರಣವಿರಲಿಲ್ಲ; ಸ್ನೇಹವು ನಿರ್ಬಂಧವಿಲ್ಲದುದರಿಂದ ಪಕ್ವವಾಗುವುದಕ್ಕೆ ಅವಕಾಶವಿರಲಿಲ್ಲ; ಅದನ್ನು ನೀವು ಪ್ರೇಮವೆಂದಾಗಲಿ ಪ್ರಣಯವೆಂದಾಗಲಿ ತಿಳಿಯಲಿಲ್ಲ. ಈಗಲಾದರೋ, ಇನ್ನು ಮುಂದೆ ನೀವು ಮಾಲತಿಯೊಂದಿಗೆ ಸಂಕೋಚವನ್ನು ಬಿಟ್ಟು ಧಾರಾಳವಾಗಿ ಮಾತಾಡುವುದಕ್ಕೆ ಅವಕಾಶವಿಲ್ಲ. ನಿಮಗೆ ಇಷ್ಟವಿಲ್ಲದಿದ್ದರೂ ನನ್ನ ಜತೆಯಲ್ಲಿ ಇರಬೇಕಾಗಿದೆ. ಬಾಲ್ಯದಾರಭ್ಯ ಬೆಳೆದುಬಂದ ನಿಮ್ಮ ಸುಖವನ್ನು ಹೋಗಲಾಡಿಸುವುದಕ್ಕೆ ನಾನೇ ಕಾರಣವಾಗಿದ್ದೇನೆ. ನಾನೇ ನಿಮ್ಮ ಪ್ರಣಯದ ಪ್ರವಾಹಕ್ಕೆ ಅಡ್ಡಿ ಮಾಡಿದಂತಾಗಿ ಆ ಪ್ರಣಯವು ಪ್ರೇಮರೂಪವಾಗಿ ಪರಿಣಮಿಸಿ ಪೂರ್ಣತೆಯನ್ನು ಹೊಂದಿದೆ"

ಶೋಭನೆಯ ಯುಕ್ತಿಗಳನ್ನು ಕೇಳಿ, ರಮೇಶನು ಕಷ್ಟಪಟ್ಟು ಸ್ವಲ್ಪ ನಕ್ಕು, 'ಶೋಭನೆ! ಒಂದು ದಿನವಿಲ್ಲದಿದ್ದರೆ ಒಂದು ದಿನ ಪಂಡಿತರಲ್ಲಿ ತರ್ಕವಮಾಡಿ, ನೀನವರನ್ನು ಖಂಡಿತವಾಗಿ ಜಯಿಸಬಲ್ಲೆ. ಇದರಲ್ಲಿ ನನಗೆ ಲೇಶವೂ ಸಂದೇಹವಿಲ್ಲ! ಇಷ್ಟಾಯಿತು—ಇಲ್ಲಿಗೆ ತರ್ಕವು ಮುಗಿಯಿತೋ ಅಥವಾ ಉಳಿದಿದೆಯೋ?' ಎಂದು ಕೇಳಿದನು.

ಶೋಭನೆಯ ಮುಖದಲ್ಲಿ ಸ್ವಲ್ಪ ಮುಗುಳ್ನಗೆಯು ಕಂಡಿತು. ನೋಡುತ್ತಿದ್ದಹಾಗೆ ಆ ನಗುವು ಅಳಿಸಿಹೋಗಿ ವಿಷಾದದಿಂದ ಗಂಭೀರಭಾವವು ಹುಟ್ಟಿ ಶೋಭನೆಯು,' ನಗಬೇಡಿರಿ, ಅದೆಲ್ಲಾ ಪ್ರಣಯವಲ್ಲವೆಂದೂ ನೀವು ನನ್ನವರೇ ಹೊರ್ತು ಇತರರಲ್ಲಿ ಆಸಕ್ತರಲ್ಲವೆಂದು ನಾನು ನಂಬಿರಬಹುದೆಂದೂ ತೋರಿಕೊಟ್ಟರೆ ನನಗೆ ಮತ್ತೆ ಬೇರೆ ಬೇಕಾಗುವುದೇನು ಉಳಿಯಿತು? ಹಾಗಿದ್ದರೆ ಈ ಪ್ರಪಂಚದಲ್ಲಿ ನನ್ನಂತೆ ಸುಖಿಗಳು ಉಂಟೆ? ನನ್ನ ಹೊಟ್ಟೆಯಲ್ಲಿ ಉರಿಯುತ್ತಿರುವ ಜ್ವಾಲೆಯನ್ನು ನೀವು ಹೇಗೆ ನೋಡಿ ತಿಳಿಯಬಲ್ಲಿರಿ? ನಾನು ಅನೇಕ ಯುಕ್ತಿಗಳನ್ನು ಬಲ್ಲೆನು. ಆ ಯೋಚನೆಯಾವಾಗಲೂ ಜಪತಪ ಧ್ಯಾನಗಳಾಗಿವೆ. ರಾತ್ರಿಹಗಲು ನನಗೆ ಅದೇ ಯೋಚನೆಯಾಗಿದೆ. ಒಂದೊಂದು ವೇಳೆ ಸ್ವಾಮಿಯಲ್ಲಿ ಅನ್ಯಾಯವಾಗಿ ಅನುಮಾನಪಡುತ್ತೇನೆಂಬ ದಾರುಣವಾದ ಯಾತನೆಗೆ ಗುರಿಯಾಗುತ್ತೇನೆ. ಹೀಗೆಲ್ಲಾ ವಿಧವಿಧವಾದ ಭಾವನೆಗಳಿಂದ ಕಾಲವಂ ಕಳೆಯುವುದಾಗಿದೆ. ಇಷ್ಟು ದ. ಭಾವನೆಗಳಿಗೆ ಗುರಿಯಾಗಿದ್ದರೂ ನನಗೆ ಹುಚ್ಚು ಹಿಡಿಯದಿರುವುದು ಹೆಚ್ಚು ಆಶ್ಚರ್ಯವಾಗಿದೆ' ಎಂದಳು.

ಯುವಕ—ಶೋಭನೆ ! ಇನ್ನು ನಾನು ಹೆಚ್ಚು ಕೇಳಲಾರೆನು. ಆರನ್ನು ಎಷ್ಟು ನೋಡಿದರೂ ನನ್ನ ಆಶೆಯು ಪೂರೈಸದೋ, ಆರನ್ನು ಎಷ್ಟು ಪ್ರೀತಿಸಿದರೂ ತೃಪ್ತನಾಗೆನೊ ಆರ ಮೂರ್ತಿಯು ಸರ್ವದಾ ನನ್ನ ಹೃದಯದಲ್ಲಿ ತುಂಬಿದೆಯೋ ಅಂತಹವಳಿಂದ ಇಂತಹ ಅಪನಂಬಿಗೆಯ ಮಾತುಗಳನ್ನು ಕೇಳುವುದಕಿಂತ ಸಿಡಿಲು ಹೊಡಿದು ಹೋಗುವುದು ನನ್ನ ಪಕ್ಷಕ್ಕೆ ಮೇಲಾಗಿದೆ.

ಆ ಮಾತುಗಳು ಮಿಂಚಿನ ವೇಗದಿಂದ ಹೋಗಿ ಶೋಭನೆಯ ಮನಸ್ಸಿಗೆ ತಟ್ಟಿದುವು. ಅವಳು ಸ್ವಾಮಿಯ ಪಾದಗಳನ್ನು ಕಟ್ಟಿಕೊಂಡು, 'ನಾಥ! ನನ್ನ ಪಾಪಕ್ಕೆ ಪ್ರಾಯಶ್ಚಿತ್ತವುಂಟೆ? ನಾನಿದ್ದು ನಿಮಗೆ ಸುಖವಿಲ್ಲ, ಈ ಕೆಟ್ಟ ಮನವುಳ್ಳವಳಾದನ್ನೂ ಸುಖಪಡಿಸಲಾರಳೆಂದು ಚೆನ್ನಾಗಿ ತಿಳಿದುಕೊಂಡಿದ್ದೇನೆ. ನನ್ನ ಪ್ರಾಣಗಳಿಗೆ ಕೊನೆಗಾಣಿಸಿದರೆ ಅದರಿಂದ ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾದಂತಾಗುವುದು' ಎಂದಳು.

ಯುವಕನಿಗೆ ಹೆಂಡತಿಯಮೇಲೆ ಇದ್ದ ಪ್ರಣಯವು ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಅವಳ ಮಾತುಗಳನ್ನು ಕೇಳಿ ಅವನ ಮನಸ್ಸು ಕರಗಿಹೋಯಿತು. ಅವನು ಉಕ್ಕಿಬಂದ ಅಶ್ರುಜಲವನ್ನೊರಸಿಕೊಂಡು,' ಶೋಭನೆ! ನಾನೇನನ್ನುಹೇಳಿದರೂ ಪ್ರಕಾರಾಂತರವಾಗಿ ತಿಳಿಯಬೇಡ; ನನಗೆ ಉಂಟಾಗಿದ್ದ ತೀವ್ರಯಾತನೆಯಿಂದ ಮಾತುಗಳು ಹೊರಗಾದುವು; ನೀನು ನಿನ್ನ ಮನಸ್ಸಿನಲ್ಲಿದ್ದುದನ್ನೆಲ್ಲಾ ಬಿಚ್ಚಿ ಹೇಳಿದುದು ಒಳ್ಳೆಯದಾಯಿತು; ನಿನ್ನ ಮನಸ್ಸಿನಲ್ಲಿ ಮತ್ತೇನಿದ್ದರೂ ಹೇಳಿಬಿಡು; ಮುಚ್ಚುಮರೆ ಮಾಡಬೇಡ'ವೆಂದು ಹೇಳಿದನು.

ಶೋಭನೆ—ಎಲ್ಲಾ ಹೇಳಬೇಕೆಂದು ಇರುವಾಗ ಅವದನ್ನೂ ಮರೆಮಾಡುವುದಿಲ್ಲ; ಅದರಿಂದ ನನ್ನ ಅದೃಷ್ಟದಲ್ಲಿದ್ದುದು ಆಗಿಹೋಗಲಿ; ಏನು ಬಂದರೂ ಸಹಿಸಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ; ಎಲ್ಲವನ್ನೂ ಕೇಳಿ ಈ ಪಾಪಿಯಾದವಳಿಗೆ ನಿಮ್ಮ ಚರಣದಲ್ಲಿ ಸ್ಥಳವಂ ಕೊಡಬಹುದಾದರೆ ಕೊಡಬಹುದು, ಇಲ್ಲವಾದರೆ ಸಾಯುವುದಕ್ಕೆ ಸಿದ್ಧವಾಗಿದ್ದೇನೆ; ಸಾಯುವುದಕ್ಕೆನಗೆ ಸ್ವಲ್ಪವೂ ಭಯವಿಲ್ಲ; ರಾತ್ರಿಹಗಲು ದೇವರು ನನ್ನನ್ನು ಇಲ್ಲಿಗೆ ಸಾಕುಮಾಡಲೆಂದು ಕೇಳಿಕೊಳ್ಳುತ್ತಿದ್ದೇನೆ; ಅದನ್ನು ದೇವರೇ ಬಲ್ಲ!

ಹೀಗೆಂದು ಹೇಳಿ ಶೋಭನೆಯು ಕಣ್ಣೀರನ್ನೊರಸಿಕೊಂಡಳು. ಯುವಕನು ವ್ಯಥೆಯಿಂದ ಅವಳ ಹೇಳಿಕೆಯನ್ನು ಕೇಳಲು ಎದುರು ನೋಡುತ್ತಿದ್ದನು.

ಶೋಭನೆ—(ಸೆರಗನ್ನು ಸರಿಮಾಡಿಕೊಂಡು) ಮದುವೆಯಾದ ಹೊಸದರಲ್ಲಿ ನೀವು ಸಾಯಂಕಾಲ ಮನೆಗೆ ಬರುತ್ತಲೇ ನನ್ನನ್ನು ನೋಡಬೇಕೆಂದಿದ್ದ ಕುತೂಹಲವು ಈಚೆಗೆ ತಪ್ಪಿಹೋಯಿತು. ಆ ಕುತೂಹಲವು ಈಗ ಎಲ್ಲಿ ಹೋಯಿತು? ಅದಕ್ಕೆ ಬದಲಾಗಿ ಈಚೆಗೆ ಸಂಧ್ಯಾಕಾಲ ಮನೆಗೆ ಬರುತ್ತಲೇ ಆರನ್ನು ನೋಡದಿದ್ದರೆ ವ್ಯಾಕುಲವುಳ್ಳವರಾಗುವಿರಿ? ಮತ್ತೆ ಆರನ್ನು ನೋಡಿದರೆ ಆ ವ್ಯಾಕುಲವು ಹೋಗಿ ಮುಖವು ಹರುಷದಿಂದ ಅರಳುವುದು? ಅಂತಹ ಅರಳಿದ ಮುಖವನ್ನು ಚಿತ್ರದಲ್ಲಿ ಬರೆದಿಡಬೇಕೆಂದು

ನನಗೆ ಬಹಳ ಆಶೆ; ಆದರೆ ನಾನು ಚಿತ್ರಬರೆಯುವವಳಲ್ಲ, ಬರೆಯಲೂ ಬಾರದು. ಆದರೂ ಆ ಮುಖಭಾವವು ನನ್ನ ಮನಸ್ಸಿನಲ್ಲಿ ಅಂಕಿತವಾಗಿದೆ. ಮಾಲತಿಯ ಸಂಗಡ ಮಾತಾಡುತ್ತಿರುವಾಗ ನಿಮಗೆ ಉಂಟಾಗುವ ಆನಂದವು ಹೇಳತೀರದು. ನಿಮ್ಮ ಪ್ರತಿವ್ಯವಹಾರದಲ್ಲಿಯೂ ಪ್ರತಿ ಭಾವದಲ್ಲಿಯೂ ಪ್ರತಿಮಾತಿನಲ್ಲಿಯೂ ನಿಮಗೆ ಮಾಲತಿಯಮೇಲೆ ಇರುವ ಪ್ರಣಯವು ವ್ಯಕ್ತವಾಗಿ ನನ್ನನ್ನು ಚೇವದ್ದಶೆಯಲ್ಲಿಯೇ ಸುಡುತಿದೆ. ನಿಮ್ಮ ನಡೆಗೆಯ ಪ್ರತಿ ಹೆಜ್ಜೆಯಲ್ಲಿಯೂ ನಮ್ಮಿಬ್ಬರಲ್ಲಿ ನೀವು ಮಾಡಿಕೊಂಡಿರುವ ಭೇದವು ಸ್ಪಷ್ಟವಾಗುತ್ತದೆ. ನನ್ನೆದುರಿಗೆ ಮನಃಪೂರ್ವಕವಾದಾ ಹರುಷದಿಂದುಂಟಾಗುವ ನಗುವು ಬರುವುದಿಲ್ಲ. ನನ್ನೆದುರಿಗೆ ಆ ಆನಂದದಿಂದುಂಟಾಗುವ ಅಕ್ಷಪಿಸ್ಸೃತಿಯೂ ಇಲ್ಲ. ಮುಖ್ಯ ಮಾಲತಿಯು ಎದುರಿಗೆ ಇಲ್ಲದಿದ್ದರ ಪ್ರಾಣಬಿಡುವವರಂತಿರುವಿರಿ. ”

ಯುವಕ:- ಮಾಲತಿಯನ್ನು ನೋಡಿದರೆ ನನಗೆ ಸಂತೋಷವಾಗುವುದುಂಟು, ನಾನು ಅವಳನ್ನು ಪ್ರೀತಿಸುವುದೂ ಉಂಟು. ಆದಾವದನ್ನೂ ನಾನೊಪ್ಪದೆ ಇಲ್ಲ. ಈಗಲೂ ಒಪ್ಪಿಕೊಳ್ಳುವೆನು. ಆದರೆ ನಿನ್ನ ಸ್ವಂತ ಕಲ್ಪನೆಯಿಂದ ಅವಳನ್ನು ನೀನು ಎಕ್ಕರಿಸಿ ಎತ್ತಿಹಾಕುವ ರೀತಿ ಯಾವದೂ ಸರಿಯಲ್ಲ. ನಿನಗೆ ಹೇಗೆ ಸಂಶಿಕೆಯುಂಟುಮಾಡಬಹುದೋ ಅದಾವದೂ ನನಗೆ ಗೊತ್ತಾಗುವುದಿಲ್ಲ. ನೀನು ನಂಬುವುದಾದರೆ—

ಶೋಭನೆಯು ಮಾತನ್ನು ಪೂರೈಸಗೊಡದೆ, “ ನಿಮಗೆ ಮತ್ತೊಂದು ಮಾತನ್ನು ಹೇಳಲಿಲ್ಲ. ಅದನ್ನು ಮರೆಮಾಡುವುದಕ್ಕೆನಗೆ ಇಷ್ಟವಿಲ್ಲ. ಮಾಲತಿಯನ್ನು ಮದುವೆಮಾಡಿಕೊಳ್ಳುವುದಕ್ಕೆ ಅನೇಕರು ಬಂದು ಕೇಳಿದರು. ನೀವು ಸುಕುಮಾರನಿಗೆ ಹೊರ್ತು ಮತ್ತಾರಿಗೂ ಅವಳನ್ನು ಕೊಟ್ಟು ಮದುವೆ ಮಾಡುವುದಿಲ್ಲವೆಂದು ಖಂಡಿತ ಹೇಳಿದಿರಿ ಸುಕುಮಾರನು ವಿಲಾಯಿತಿಯಿಂದ ಹಿಂದಿರುಗಿ ಬರುವುದು ಗೊತ್ತಿಲ್ಲ. ಅದೂ ನನಗೆ ಸಂದೇಹವನ್ನುಂಟುಮಾಡುವುದಕ್ಕೊಂದು ಕಾರಣವಾಗಿದೆ ” ಎಂದಳು.

ಯುವಕ:—(ಆಶ್ಚರ್ಯದಿಂದ) ಮಾಲತಿಯನ್ನು ಸುಕುಮಾರನಿಗೆ ಕೊಟ್ಟು ಮದುವೆಯಾಗುವುದು ಖಂಡಿತ; ಅವಳು ಅವನನ್ನು ಪ್ರೀತಿಸುತ್ತಾಳೆ.

ಅವನು ವಿಲಾಯಿತಿಯಿಂದ ಬರುತ್ತಲೇ ಲಗ್ನವಾಗುವುದು. ಹೋದವರ್ಷ ಅವನಿಗೆ ಪರೀಕ್ಷೆಯಾಗಲಿಲ್ಲ. ಈವರ್ಷಪರೀಕ್ಷೆಯಾಗದಿದ್ದರೆ ಬರುವುದು ಸ್ವಲ್ಪ ಸಾವಕಾಶವಾಗಬಹುದು. ಹಾಗಾದರೂ ಮಾಲತಿಯನ್ನು ಬೇರೆ ಕೊಟ್ಟು ಲಗ್ನವನ್ನು ಮಾಡೆನು. ಅದಕ್ಕೋಸ್ಕರವಾಗಿ ನಿನ್ನ ಕಣ್ಣಿಗೆನ್ನ ಪ್ರೇಮವು ಹೆಚ್ಚಾದಂತೆ ಕಂಡಿತೆಂದು ತೋರುತ್ತದೆ. ಈರ್ಷೆಯಿಂದ ಮನುಷ್ಯರು ಎಷ್ಟುಬೇಗನೆ ಕುರುಡರಾಗುತ್ತಾರೆ ?

ಶೋಭನೆಯು ತನ್ನ ತಪ್ಪು ತನಗೆ ಉಂಟಾಗಿದ್ದ ಭ್ರಾಂತಿಮೂಲಕವಾದುದೆಂದು ತಿಳಿದುಕೊಂಡಳು.

ಯುವಕ—ಶೋಭನೆ ! ನೀನು ಹೀಗೆ ಇಲ್ಲದುದನೆಲ್ಲಾ ಭಾವಿಸಿಕೊಂಡು ಅನರ್ಥಕವಾಗಿ ಅಸುಖಿಯಾಗುವೆಯಲ್ಲದೆ ನನ್ನನ್ನೂ ವ್ಯಸನಕ್ಕೆ ಗುರಿಮಾಡುವೆ. ಇನ್ನುಮುಂದೆ ಹಾಗೆ ಮಾಡಬೇಡ. ನಾನು ಏನನ್ನುಮಾಡಿದರೆ ನಿನ್ನ ಅಪನಂಬಿಕೆಯು ದೂರವಾಗುವುದು, ಹೇಳು. ನಾನು ಮಾಡತಕ್ಕುದು ಏನು? ನಿನ್ನನ್ನು ಬಿಟ್ಟು ನಾನು ಮತ್ತಾರನ್ನೂಹೆಚ್ಚು ಪ್ರೀತಿಸುವುದಿಲ್ಲ. ಎಷ್ಟುಕಾಲವಾದರೂ ಮಾಲತಿಯನ್ನು ಬಿಟ್ಟಿರುವೆನು. ನಿನ್ನನ್ನುಬಿಟ್ಟು ಒಂದುಕ್ಷಣವಾದರೂ ಅಗಲಿರೆನು. ನಿನ್ನನ್ನು ನೋಡದಿದ್ದರೆ ನನಗೆ ಉಂಟಾಗುವ ಕಷ್ಟವನ್ನು ಬಣ್ಣಿಸಲಾರೆನು. ಹೊರಗೆ ಹೋಗಿ ಆವ ಕೆಲಸವನ್ನು ಮಾಡುತ್ತಿದ್ದರೂ ಮನವು ನಿನ್ನ ಮೇಲಿರುವುದು. ನಿನ್ನ ಮೇಲಿನ ಜ್ಞಾನದಿಂದ ಮಾಡುತ್ತಿದ್ದ ಕೆಲಸವೇ ಮರೆತು ಹೋಗುವುದು. ನಿನ್ನಿಂದಲೇ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸಿಕೊಳ್ಳುವುದಕ್ಕೆನಗೆ ಶಕ್ತಿಯಿರುವುದು. ಶೋಭನೆ! ಹೀಗಿದ್ದುಕೊಂಡಿದ್ದರೂ ನೀನೆನ್ನಲ್ಲಿ ನಂಬಿಕೆಯನಿಡದೆ ಕಷ್ಟವಂ ಕೊಡಬಹುದೆ? ಇನ್ನು ಮುಂದೆ ನನ್ನಲ್ಲಿ ದಯೆಯಿಲ್ಲದವಳಾಗಬೇಡ.

ಮನಸ್ಸಿನ ವ್ಯಾಕುಲತೆಯಿಂದ ಯುವಕನು ಹೆಂಡತಿಯ ಕಾಲನ್ನು ಹಿಡಿದುಕೊಳ್ಳುವುದಕ್ಕೆ ಹೋದನು. ಶೋಭನೆಯು ಚಮಕಿತೆಯಾಗಿ ಅವನ ಕೈಯನ್ನು ಹಿಡಿದು ತನ್ನ ವಕ್ಷದಮೇಲೆ ಇಟ್ಟುಕೊಂಡಳು. ಆಗವಳ ಕಣ್ಣಿಗೆ ಪ್ರಪಂಚವೇ ತಿರುಗುವಂತೆ ಕಂಡಿತು. ಎಲ್ಲವೂ ಸ್ವಪ್ನದಂತೆ ತೋರಿತು. ತನಗಿಂತ ಸುಖಿಗಳು ಪ್ರಪಂಚದಲ್ಲಿ ಮತ್ತಾರೂ ಇಲ್ಲವೆಂದು

ತಿಳಿದಳು. ಹಾಳಾದಾ ಕಲ್ಪನೆಯಿಂದ ತಾನು ನಿರರ್ಥಕವಾಗಿ ಗಂಡನನ್ನು ದೋಷಿಯೆಂದು ತಿಳಿದುಕೊಂಡೆನೆಂದು ತನ್ನನ್ನು ತಾನೇ ಧಿಕ್ಕರಿಸಿಕೊಂಡಳು. ಅವಳ ಹೃದಯವು ಅನುತಾಪದಿಂದ ತುಂಬಿತು. ಗಂಡನ ಭುಜದ ಮೇಲೆ ತಲೆಯನ್ನಿಟ್ಟುಕೊಂಡು ಅಳುವುದಕ್ಕೆ ತೊಡಗಿ, ಮನದಲ್ಲಿಯೇ ಕ್ಷಮೆಯನ್ನು ಪ್ರಾರ್ಥಿಸಿದಳು, ಬಾಯಿಂದ ಮಾತು ಹೊರಡದು, ಏನನ್ನು ಹೇಳಿಕೊಳ್ಳುವುದಕ್ಕೂ ತೋಚಲಿಲ್ಲ. ಯುವಕನಿಗೆ ಅವಳ ಮನದ ಭಾವವು ಗೊತ್ತಾಯಿತು. ಅವಳ ಮನಸ್ಸಿನಲ್ಲಿದ್ದ ಸಂದೇಹವೆಲ್ಲಾ ತೊಲಗಿತೆಂದು ತಿಳಿದುಕೊಂಡನು. ಪುನಃ ಸಂದೇಹಕ್ಕೆ ಅವಕಾಶವಿಲ್ಲವೆಂದು ಸ್ಥಿರವಾಯಿತು. ಆಗವರಿಬ್ಬರೂ ಸುಖದಿಂದ ಅಭಿನಂದಿತರಾಗಿ ಮೌನವಾಗಿದ್ದರು.

ಇದ್ದಹಾಗೆ ಆ ಸಮಯದಲ್ಲಿ ಮಾಲತಿಯು ಮನೆಯೊಳಗೆ ಬಂದಳು, ಬಂದವಳು ನಗುತ್ತ ಒಂದು ಗುಲಾಬಿಹೂವನ್ನು ಯುವಕನ ಕೈಯಲ್ಲಿರಿಸಿ, 'ನೋಡು! ನಿನಗೋಸ್ಕರ ಇದೊಂದು ಹೊಸ ಪದಾರ್ಥವನ್ನು ತಂದೆನು, ನಮ್ಮ ಬಾಗಿಲೆದುರಿಗಿದ್ದ ಗಿಡದಲ್ಲಿ ಇಂದಿಗೊಂದು ಹೂವು ಬಿಟ್ಟಿದ್ದಿತು' ಎಂದು ಹೇಳಿದಳು.

ಮಸಿಯು ಬಳಿದಂತೆ ಕತ್ತಲೆಯಾಗಿದ್ದ ಮನೆಯು ಮಾಲತಿಗೆ ಸ್ವಭಾವವಾಗಿದ್ದ ಅವಳ ಹರುಷೋತ್ಸಾಹದಿಂದ ಬೆಳಕಾಯಿತು. ಇದನ್ನು ಅರಿಯದಿದ್ದ ಮಾಲತಿಯ ಸರಳ ಹರುಷಭಾವವನ್ನು ನೋಡಿ ಯುವಕನ ಕಣ್ಣುಗಳಲ್ಲಿ ಕಂಬನಿಯು ಕಾಣಿಸಿಕೊಂಡಿತು. ಮಾಲತಿಯು ಮುಗ್ಧೆಯಾಗಿದ್ದಳು. ಅವಳಿಗೆ ಸಲುವಾಗಿಯೇ ಅವಳ ಅಣ್ಣನಿಗೆ ಅತ್ಯಂತ ವ್ಯಸನ. ಅವಳ ಮೇಲಿನ ಪ್ರೀತಿಗೆ ಸಲುವಾಗಿಯೇ ಅಂದು ರಮೇಶನು ಬಂದದ್ದು. ರಮೇಶನ ಶೋಭನೆಯೂ ಅಸುಖಿಯಾಗಿದ್ದಳು. ಯುವಕನು ಸರಳ ಹೃದಯವುಳ್ಳ ಬಾಲೆಯ ಮುಖವನ್ನು ನೋಡಿ, ಹರುಷವಿಷಾದಗಳಿಂದ ಕೂಡಿದ ಭಾವದಿಂದ ಸ್ವಲ್ಪ ನಕ್ಕು ಅವಳು ಕೊಟ್ಟಿದ್ದ ಗುಲಾಬಿ ಹೂವನ್ನು ತೆಗೆದುಕೊಂಡು ಮೂಸಿನೋಡಿದನು.

ಪುನಃ ಬೆಂಕಿಯು ಉರಿಯೆದ್ದಿತು! ಅವನಾ ನಗುವನ್ನು ಕಂಡು ಶೋಭನೆಯು ತನ್ನ ಸಂಕಲ್ಪವನ್ನು ಸ್ಥಿರಗೊಳಿಸಲು ಸಮರ್ಥೆಯಾದಳು. ಮನು

ಪ್ಪನು ಆತ್ಮವಿರೋಧಿ, ಅಸ್ಥಿರಚಿತ್ತನು, ಆಗ್ಗೆ ಒಂದು ಕ್ಷಣಕ್ಕೆ ಮೊದಲು ಶೋಭನೆಯು ತನ್ನ ಮನಸ್ಸಿನಲ್ಲಾವ ಸಂದೇಹಕ್ಕೂ ಅವಕಾಶವಂ ಕೊಡಕೂಡದೆಂದು ಸಂಕಲ್ಪಿಸಿದ್ದಳು : ಆದರೆ ಪುನಃ ಅದೇ ಸಂದೇಹವುಂಟಾಗಿ ಆ ಸಂದೇಹಕ್ಕೆ ಕಾರಣವನ್ನು ತಾನೇ ಅರಿಯದವಳಾಗಿದ್ದಳು. ರಮೇಶನ ಮಾತುಗಳೆಲ್ಲಾ ಫಲಿಸಿಲ್ಲದೆ ಹೋದುವು. ರಮೇಶನು ಸ್ವಲ್ಪ ನಕ್ಕ ನಗುವಿನಲ್ಲಿ ಅದೆಲ್ಲಾ ಹುಸಿಯಾಗಿ ಹೋದುವು. ಶೋಭನೆಯು ಅಂಥಾ ಪ್ರೇಮಮಯವಾಗಿಯೂ ಸ್ವಚ್ಛಮಯವಾಗಿಯೂ ಸುಖಮಯವಾಗಿಯೂ ಇದ್ದ ನಗುವನ್ನು ರಮೇಶನ ಮುಖದಲ್ಲಿನ್ನಾಗಲೂ ಕಂಡಿರಲಿಲ್ಲ. ರಮೇಶನು ನಿಜವಾಗಿಯೂ ತನ್ನ ಮನಸ್ಸನ್ನು ತಾನೇ ಅರಿತವನಾಗಿರಲಿಲ್ಲ. ಹಾಗೆ ಅರಿತವನಾಗಿದ್ದರೆ ಹೀಗೆ ನಗುತ್ತಿದ್ದನೆ ? ಅಂಥಾ ನಗುವು ಶೋಭನೆಯ ಅದೃಷ್ಟಕ್ಕೆ ಒದಗಿರಲಿಲ್ಲ, ಅಂಥಾ ಮಧುರತರ ಮನುಷ್ಯನಿಂದ ನೀಡಿದ ನಗುವು, ಅಂಥಾ ಪ್ರೇಮಜನಿತವಾದ ನಗುವು. ಅಂಥಾ ಆನಂದಯೋಗಸೂಚಿತ ನಗುವು, ಅನುರಾಗದಿಂದ ರಂಜಿತವಾದ ಅಂಥಾ ನಗುವು ಶೋಭನೆಯ ಹಣೆಯಲ್ಲಿ ಬರೆದಿರಲಿಲ್ಲ. ಹಾಗಾದರೆ ಅದುವರೆಗೂ ರಮೇಶನು ಕಪಟವಾತುಗಳಿಂದ ಶೋಭನೆಯನ್ನು ಮೋಸಗೊಳಿಸಿದನೆ ? ಹಾಗಿಲ್ಲ ರಮೇಶನು ತನ್ನ ಮನಸ್ಸನ್ನು ತಾನೇ ಅರಿಯದವನಾಗಿದ್ದನು. ಹಾಗಾದರೆ. ' ರಮೇಶ ! ನೀನು ನಿಜವಾಗಿ ಶೋಭನೆಯವನಲ್ಲವೆ? ನಿಜವಾಗಿಯೂ ಮಾಲತಿಗೆ ಸೇರಿದವನೆ?' ರಮೇಶನ ಆ ನಗುವು ಶೋಭನೆಯ ಮನಸ್ಸಿನಲ್ಲಿ ನಾಟಿತು. ಅವಳ ಹೃದಯದಲ್ಲಿ ಪುನಃ ಮೊದಲಿನಾ ದಾವಾನಲದ ಉರಿಯೆದ್ದಿತು.

## ಮೂರನೆಯ ಪರಿಚ್ಛೇದ.

ಅಂದಿನದ ಮೊದಲ್ಗೊಂಡು ಶೋಭನೆಯು ಬಾಯಿಬಿಡಲಿಲ್ಲ. ಮೊದಲಿನಂತೆ ಸಂದೇಹವೂ ಬಂದೊಂದ. ತಡವೆ ಅನುತಾಪವೂ ಹುಟ್ಟಿ ಅವಳ ಮನಸ್ಸು ಅಸ್ಥಿರವಾಗುತ್ತ ಬಂದಿತು ಅದನ್ನೆಲ್ಲಾ ತನ್ನೊಳು ತಾನೇ ಸಹಿಸಿಕೊಳ್ಳಬೇಕೆಂದು ಸಂಕಲ್ಪಿಸಿಕೊಂಡಿದ್ದಳು.

ನಡೆದ ಸಮಾಚಾರಗಳಾವದನ್ನೂ ಮಾಲತಿಯು ಅರಿಯಳು. ಸಣ್ಣ ದಾದಾ ಪ್ರಪಂಚದಲ್ಲಿ ಅವಳಿಗೆ ಸಲುವಾಗಿ ನಡೆದಿದ್ದ ರಾಜ್ಯಪರಿವರ್ತನೆಗಳಾವದನ್ನೂ ಅವಳು ಅರಿಯಳು. ಅದುಕಾರಣ ಅವಳ ನಗುಮೊಗದಲ್ಲಾವಾಗಲೂ ನಗುವು ತುಂಬಿದ್ದಿತು. ಆದರೆ ಆ ಮನೆಯ ಅಂಧಕಾರವು ಒಂದೊಂದು ತಡವೆ ಆ ಜೊನ್ನೆಜೊಂಪಲ ಬೊಂಬೆಯನ್ನೂ ಸ್ಪರ್ಶ ಮಾಡುತ್ತಿರುವುದು. ಶೋಭನೆಯು ಮೊದಲಿನಂತೆ ತೋಟದಲ್ಲಿ ಮಾಲತಿಯೊಡನೆ ಉಲ್ಲಾಸದಿಂದ ತಿರುಗಾಡಳು, ಮೊದಲಿನಂತೆ ಕಣ್ಣುಮುಚ್ಚಾಲೆ ಆಟದಲ್ಲಿ ಗಂಡನಹಿಂದೆ ಹೋಗಿ ಬಚ್ಚಿಟ್ಟುಕೊಂಡು ಮಾಲತಿಯನ್ನು ಸೋಲಿಸುತ್ತಿರಲಿಲ್ಲ, ಮಾಲತಿಯ ಹೂವುಗಳನ್ನು ಹರಿದು ಕಿತ್ತು ಅವಳನ್ನು ಅಳುವಹಾಗೆ ಮಾಡುತ್ತಿರಲಿಲ್ಲ, ಕದವಿನ ಹಿಂದೆ ಮೂಲೆಯಲ್ಲಿ ಅವಿತುಕೊಂಡು ಮಾಲತಿಯನ್ನು ಹೆದರಿಸುತ್ತಿರಲಿಲ್ಲ, ರಾತ್ರಿ ಗಂಡನ ಸಂಗಡ ಮಾತಾಡಿದುದನ್ನೆಲ್ಲಾ ಮಾಲತಿಗೆ ಹೇಳಿ ಅವಳನ್ನು ನಗುಸುತ್ತಿರಲಿಲ್ಲ. ಶೋಭನೆಯು ಬಹಳವ್ಯಸನಾಕ್ರಾಂತೆ. ಶೋಭನೆಯು ತಾನುಹುಡುಗಾಟವನ್ನು ಮಾಡುವುದಿಲ್ಲವೆಂದು ಹೇಳುವಳು. ಮಾಲತಿಯು ಮಾತ್ರ ಚಿರಕಾಲವೂ ಹುಡುಗಿಯಾಗಿರಬೇಕೆ? ಚಿರಕಾಲವೂ ಹೀಗೇವೇ ಆಡಿಕೊಂಡಿರಬೇಕೆ? ಶೋಭನೆಯು ಹೇಳಿದ ಮಾತಿನ ಅರ್ಥವಾವದೂ ಮಾಲತಿಗೆ ಗೊತ್ತಾಗಲಿಲ್ಲ. ಮಾಲತಿಯು ಮಾತಿಲ್ಲದೆ, 'ನಾನಾವಾಗಲೂ ನಗುಕೂಡದೆ ? ಆಡಬಾರದೆ ? ಹುಡುಗರು ಹೊರ್ತು ಮತ್ತಾರೂ ನಗುಕೂಡದೆ ? ಆಡಬಾರದೆ? ಮದುವೆಯಾದರೆ ನಾನೂ ಆವಾಗಲೂ ನಗುಬಾರದೆ?' ಎಂದು ಮುಂತಾಗಿ ಯೋಚಿಸಿಕೊಳ್ಳುವಳು. ಮಾಲತಿಯು ಏನನ್ನೂ ಅರಿಯದೆ, ಹುಡುಗಾಟ ಮಾಡುತ್ತ ಶೋಭನೆಯನ್ನು ನಗುವಹಾಗೆ ಮಾಡಲು ಯತ್ನಿಸುವಳು. ಅವಳಿಗೆ ಇಷ್ಟವಾದ ಹೂವುಗಳನ್ನು ತಂದು ಅವಳಮೇಲೆ ಹಾಕುವಳು. ಅದರಿಂದಲೂ ಶೋಭನೆಯ ವ್ಯಸನವುಳ್ಳ ಮುಖವು ಪ್ರಫುಲ್ಲವಾಗದುದನ್ನು ಕಂಡು, ಆಗ ಮನೆಯ ಅಂಧಕಾರದ ಛಾಯೆಯು ಅವಳ ಹೃದಯವನ್ನು ಸ್ಪರ್ಶಮಾಡುವುದು. ಶೋಭನೆಯು ನಿಜವಾಗಿಯೂ ದೊಡ್ಡಮನುಷ್ಯೆಯಾಗಿ ಆಡದೆಲೂ ನಗುದೆಲೂ ಇರುವುದನ್ನು ಕಂಡು ಮಾಲತಿಯೂ ವ್ಯಸನಾಕ್ರಾಂತೆಯಾಗಿ ಅಳು

ವುದಕ್ಕೆ ಬೇರೆ ಸ್ಥಳಕ್ಕೆ ಹೊರಟುಹೋಗುವಳು. ನದಿಯ ತೀರದಲ್ಲಿ ಒಬ್ಬಳೇ ತಿರುಗಾಡುತ್ತ ಹೊತ್ತಾದಬಳಿಕ ಮನೆಗೆ ಬರುವಳು. ಬಂದು ರಮೇಶನು ಸಂತೋಷವಾಗಿದ್ದರೆ ಆನಂದಪಡುವಳು. ಹಾಗಿಲ್ಲದೆ ರಮೇಶನು ವಿಷಣ್ಣನಾಗಿದ್ದರೆ ಸ್ತಂಭಿತೆಯಾಗಿ ಯೋಚನಾಕ್ರಾಂತೆಯಾಗುವಳು. ದೊಡ್ಡವರಾಗಿ ಸಂಸಾರಿಗಳಾದ ಬಳಿಕ ಗಂಭೀರದಿಂದ ವ್ಯಸನಪಡತಕ್ಕವರು. ಹೆಂಗಸರೆಂದೂ ಗಂಡಸರುಹಾಗೆ ವ್ಯಸನಪಡತಕ್ಕವರಲ್ಲವೆಂದೂ ಮಾಲತಿಯು ತಿಳಿದಿದ್ದಳು. ಏಕೆಂದರೆ,ಶೋಭನೆಯು ಹಾಗಿರಬೇಕೆಂದು ಹೇಳಿದ್ದಳು. ಶೋಭನೆಯೂ ಹಾಗಿದ್ದುದನ್ನು ಮಾಲತಿಯುಕಣ್ಣಾರೆ ನೋಡಿದ್ದಳು. ಹೀಗಿರುತ್ತ ಗಂಡಸಾದ ರಮೇಶನಿಗೆ ವ್ಯಸನವೇಕೆ? ಅವನು ಒಂದೊಂದು ತಡವೆ ವ್ಯಸನದಿಂದ ಊಟಮಾಡದೆ ಮಲಗಿಬಿಡುವನು. ಅದನ್ನು ನೋಡಿ ಮಾಲತಿಯೂ ಊಟವಿಲ್ಲದೆ ಯೋಚನೆಯಿಂದ ಮಲಗಿಬಿಡುವಳು. ರಮೇಶನು ಚೆನ್ನಾಗಿ ಉಲ್ಲಾಸದಿಂದಿದ್ದರೆ ಅವನಸಂಗಡ ಮಾತಾಡುವಳು, ವ್ಯಸನವುಳ್ಳವನಾಗಿದ್ದರೆ ಅವನ ಸಂಗಡ ಮಾತಾಡುವುದಕ್ಕೆ ಸಾಹಸವುಳ್ಳವಳಾಗುತ್ತಿರಲಿಲ್ಲ. ಒಂದು ದಿನ ರಾತ್ರಿ ಮಲಗಿರುವಾಗ ಮಾಲತಿಯು ಮನಸ್ಸಿನಲ್ಲಿ, ಅಣ್ಣನು ವ್ಯಸನವುಳ್ಳವನಾಗಿದ್ದರೆ ಅದಕ್ಕೆ ಕಾರಣವನ್ನು ವಿಚಾರಿಸಬೇಕೆಂದು ಯೋಚಿಸಿಕೊಂಡಳು. ಮೂರನೆಯ ದಿನ ರಮೇಶನು ವಿಷಣ್ಣನಾಗಿದ್ದನು. ಆದರೂ ಮಾಲತಿಯು ಅದಕ್ಕೆ ಕಾರಣವನ್ನು ವಿಚಾರಿಸುವುದಕ್ಕೆ ಧೈರ್ಯವುಳ್ಳವಳಾಗಲಿಲ್ಲ. ಹೀಗೆ ಅನೇಕತಡವೆ ವ್ಯಸನಕ್ಕೆ ಕಾರಣವನ್ನು ವಿಚಾರಿಸುವುದಕ್ಕೆ ಹೋಗಿ ರಮೇಶನನ್ನು ಕೇಳಲಾಗದೆ ಹಿಂದಿರುಗಿ ಬಂದು ಮನೆಯನ್ನು ಬಿಟ್ಟು ನದಿಯ ತೀರಕ್ಕೆ ಹೋಗಿ ಅಳುತ್ತ ಕುಳಿತಿರುವಳು. ಒಂದು ದಿನ ಮಾಲತಿಯು ನದಿಯ ತೀರದಲ್ಲಿ ಕುಳಿತು ಅಳುತಿರುವ ಸಮಯದಲ್ಲಿ ರಮೇಶನು ಹೋಗಿ ಆಶ್ಚರ್ಯದಿಂದ ವ್ಯಥೆಪಟ್ಟು ಮೆಲ್ಲಮೆಲ್ಲನೆ ಅವಳಿದ್ದೆಡೆ ಹೋಗಿ ಹಿಂದೆ ನಿಂತು ಅವಳ ಭುಜದಮೇಲೆ ಕೈಯಿಟ್ಟು, 'ಇದೇನು!ಮಾಲತಿ! ಆರೂ ಇಲ್ಲದ ಸ್ಥಳದಲ್ಲಿ ಒಬ್ಬಳೇ ಕುಳಿತು ಅಳುತ್ತಿ?' ಎಂದು ಕೇಳಿದನು. ಮಾಲತಿಯು ಧ್ವನಿಯಿಂದ ಗುರ್ತಿಸಿ ಹಿಂದಿರಿಗಿ ನೋಡಿದಳು. ಅವಳಿಗೆ ಹೃದಯದ ವೇಗವು ತಡಿಯಲಿಲ್ಲ. ಕಣ್ಣೀರು ಧಾರೆಯಾಗಿ ಹರಿಯಿತು. ತಾನು ಏಕೆ ಅಳು

ತ್ತಿದ್ದಳೋ ಅದನ್ನು ಮಾಲತಿಯು ಅರಿತಿರಲಿಲ್ಲ. ಅಂಥವಳು ರಮೇಶನಿಗೆ ಹೇಗೆ ತಿಳಿಯಹೇಳಬಲ್ಲಳು? ರಮೇಶನು ಮೆಲ್ಲಮೆಲ್ಲನೆ ಕಣ್ಣೀರನ್ನೊರಸಿ, ಪುನಃ, 'ಮಾಲತಿ! ಅಳುವುದೇಕೆ? ಶೋಭನೆಯು ನಿನ್ನನ್ನು ಹೆದರಿಸಿ ಅಳುಸಿದಳೆ?' ಎಂದು ಕೇಳಿದನು.

ಶೋಭನೆಯು ಮಾಲತಿಯನ್ನು ಹೆದರಿಸಿ ಅಳುಸುತ್ತಿದ್ದುದನ್ನು ನೋಡಿದ್ದನು. ಮಾಲತಿಯು ಕಣ್ಣೀರ ಪ್ರವಾಹವನ್ನು ಕಷ್ಟದಿಂದ ನಿಲ್ಲಿಸಿ, 'ಇಲ್ಲ—ಅವಳು ಇನ್ನುಮೇಲೆ ಹೆದರಿಸುವುದಿಲ್ಲವಂತೆ' ಎಂದು ವಿಷಾದದಿಂದ ಭಗ್ನವಾದಸ್ವರದಿಂದ ಹೇಳುತ್ತಲೇ, ರಮೇಶನು ಚಮಕಿತನಾಗಿ, 'ಮಾಲತಿ! ಹಾಗಾದರೆ, ನಿನಗೆ ದುಃಖವೇಕೆ ?' ಎಂದು ಕೇಳಿದನು ಮಾಲತಿಯು, 'ಶೋಭನೆಯು ಹೆದರಿಸುವುದಿಲ್ಲವೆಂದು ಹೇಳಿದುದರಿಂದಲೇ ವ್ಯಸನ'ವೆಂದಳು. ರಮೇಶನು, 'ಹಾಗಾದರೆ, ನಡೆ, ನಿನ್ನನ್ನು ಮೊದಲಿನಂತೆ ಓಡಾಡಿಸುತ್ತ ಹೆದರಿಸುತ್ತಿರಬೇಕೆಂದು ಶೋಭನೆಗೆ ಹೇಳುತಿರು' ಎಂದು ಹೇಳಿದನು.

ಮಾಲತಿಯು ಏಳಲಿಲ್ಲ—ನಗಲಿಲ್ಲ. ವಿಷಣ್ಣ ಮನಸ್ಕಳಾಗಿ ಕುಳಿತುಕೊಂಡು, ರಮೇಶನ ದುಃಖಕ್ಕೆ ಕಾರಣವನ್ನು ವಿಚಾರಿಸುವ ಬಗೆಯನ್ನು ಕುರಿತು ಯೋಚಿಸುತ್ತಿದ್ದಳು. ರಮೇಶನು ಪುನಃ, 'ಮಾಲತಿ! ಶೋಭನೆಯು ಹೆದರಿಸುವುದಿಲ್ಲವೆಂದು ನಿನಗೆ ದುಃಖವೊ ?' ಎಂದು ಕೇಳಿದನು. ಮಾಲತಿಯು ಸಮಯವು ಸಿಕ್ಕಿತೆಂದು, ಮೆಲ್ಲಮೆಲ್ಲನೆ "ದುಃಖಕ್ಕೆ ಮತ್ತೊಂದು ಕಾರಣವುಂಟು. ಅಣ್ಣ ! ನಿನಗೇನಾಗಿದೆ ? ಮೊದಲಿನಂತೆ ನೀನು ಮಾತಾಡುವುದಿಲ್ಲ. ನಾನೇನು ತಪ್ಪನ್ನು ಮಾಡಿದೆನು ?" ಎಂದು ಕೇಳಿದಳು.

ಮಾಲತಿಯು ಕೇಳಿದ ಸಹಜವಾದ ಸರಳ ಪ್ರಶ್ನೆಯಿಂದ ರಮೇಶನ ಕಣ್ಣುಗಳಲ್ಲಿ ನೀರುತುಂಬಿ ಗಲ್ಲದ ಮೇಲಿಂದ ಕಂಬನಿಯು ಹರಿದುಬಂದು ಮಾಲತಿಯ ಕೈಮೇಲೆ ಬಿದ್ದಿತು ! ಮಾಲತಿಯ ಹೃದಯವು ಸ್ತಂಭಿತವಾಗಿ ಮುಖವು ಬಾಡಿತು. ಮಾಲತಿಯು ತಾನೇನೋ ತಪ್ಪನ್ನು ಮಾಡಿರಬೇಕೆಂದೂ ಇಲ್ಲವಾಗಿದ್ದರೆ ಅವನ ಕಣ್ಣುಗಳಲ್ಲಿ ನೀರು ತುಂಬಲೇಕೆಂದೂ ಯೋಚಿಸಿ, ಮಾಲತಿಯು ಸಂಕೋಚವನ್ನು ಬಿಟ್ಟು, ವ್ಯಾಕುಲದಿಂದ, 'ಅಣ್ಣ ! ನಾನೇನು ತಪ್ಪನ್ನು ಮಾಡಿದೆನು ? ಹೇಳು. ನಿನಗೆ ನನ್ನಮೇಲೆ

ಕೋಪವೆ ? ಕೋಪಿಸಿಕೊಳ್ಳದೆ ನನ್ನ ತಪ್ಪನ್ನು ಹೇಳು ' ಎಂದು ಕೇಳಿದಳು, ಯುವಕನು ಅವಳ ವ್ಯಾಕುಲತೆಯನ್ನು ನೋಡಿ ಕಳವಳಗೊಂಡು, ' ಇಲ್ಲ ಮಾಲತಿ ! ನೀನಾವ ತಪ್ಪನ್ನೂ ಮಾಡಿಲ್ಲ'ವೆಂದು ಹೇಳಿದನು.

ಮಾಲತಿ—ಹಾಗಾದರೆ ಮೊದಲಿನಂತೆ ನೀನೆನ್ನ ಸಂಗಡ ಮಾತಾಡುವುದಿಲ್ಲವೇಕೆ? ಮಾತಾಡುತ್ತಿದ್ದಹಾಗೆ ನಿನ್ನ ಕಣ್ಣುಗಳಲ್ಲಿ ನೀರು ಬಂದುದಕ್ಕೆ ಕಾರಣವೇನು?

ಮನುಷ್ಯನು ಸುಖದಲ್ಲಿ ಮಾತ್ರ ನಗುವನೆಂದು ಹೇಳುವುದಕ್ಕಾಗದು. ಅಳಿಸಿಹೋಗುವಾಗಲೂ ದೀಪದ ಉರಿಯು ಹೆಚ್ಚಾಗಿ ಜ್ವಲಿಸುವುದು? ಅಂಧಕಾರದಲ್ಲಿಯೂ ಮಿಂಚುಮಿನುಗುವುದು; ಇಂದು ಯುವಕನು ಹುಡಗಿಯ ಮಾತಿಗೆ ದುಃಖಪಟ್ಟು ಆ ದುಃಖದಲ್ಲಿಯೂ ನಕ್ಕು, ' ಮಾಲತಿ! ನಿನ್ನಮೇಲೆ ಕೋಪಮಾಡುವುದಕ್ಕಾದಾಗಲಾದರೂ ಸಂಭವವುಂಟೆ? ಅಂಥಾ ಸಂಭವವಿಲ್ಲ. ನನಗೆ ಮೊದಲಿನ ಭಾವವು ಇಲ್ಲದುದಕ್ಕೆ ಕಾರಣವನ್ನೂ ಕಠೋರವಾದೀ ಕಣ್ಣುಗಳಿಂದ ನೀರು ಬಂದುದಕ್ಕೆ ಕಾರಣವನ್ನೂ ನೀನು ತಿಳಿಯಬಲ್ಲೆಯಾ? ನಿನ್ನಂಥ ಅರಿಯದ ಚಿಕ್ಕ ಹುಡುಗಿಯು ಅವನ್ನೆಲ್ಲಾ ಹೇಗೆ ತಿಳಿದುಕೊಳ್ಳಬಲ್ಲೆ? ಮಾಲತಿ! ' ಎಂದು ಹೇಳಿದನು.

ರಮೇಶನು ಹೇಳಿದುದು ನಿಜ—ಮಾಲತಿಯು ಇಪ್ಪತ್ತುವರ್ಷದವಳಾಗಿದ್ದರೂ ಇನ್ನೂ ಬಾಲೆ. ಮನಸ್ಸಿನ ಸರಳತೆಗೆ ಸಲುವಾಗಿ ಇನ್ನೂ ಬಾಲೆ. ಬಾಲೆಯಾಗಿದ್ದರೂ ಮಾಲತಿಯು ಹೆಂಗಸು. ಹೆಂಗಸರು ದುಃಖಿಗಳೊಂದಿಗೆ ದುಃಖಿಗಳಾಗುವರು. ವ್ಯಥೆಪಡುವವರ ಸಂಗಡ ವ್ಯಥೆಪಡದಿರರು. ಮತ್ತಾವದನ್ನು ತಿಳಿಯದಿದ್ದರೂ ಪರರ ದುಃಖವನ್ನು ತಿಳಿಯಬೇಕಾದಾಗ ಅವರು ಹುಡುಗಿಯರಾಗಿರರು. ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಅವರು ಚಿಕ್ಕವರಾಗಿದ್ದರೂ ಅನ್ಯರ ಕಷ್ಟವನ್ನು ತಿಳಿದುಕೊಳ್ಳುವುದರಲ್ಲಿ ನೂರಾರು ವರ್ಷದ ಮುದುಕರೂ ಅವರಿಗೆ ಸಮನಾಗರು. ಹುಡುಗಿಯಾಗಿದ್ದ ಮಾಲತಿಯು ಪ್ರೌಢೆಯಂತೆ, 'ಅಣ್ಣ ನಿನ್ನಮಾತನ್ನು ನಾನು ತಿಳಿಯಲಾರೆನೆ? ಹುಡುಗಿಯೆ? ಈಗ್ಗೆ ಮೂರು ವರ್ಷಕ್ಕೆ ಹಿಂದೆ ನನ್ನನ್ನು ದೊಡ್ಡವಳೆಂದು ಹೇಳಿ ನಿನ್ನ

ಮನಸ್ಸಿನಲ್ಲಿದ್ದ ಮಾತನ್ನು ನನಗೆ ಹೇಳಲಿಲ್ಲವೆ ? ಆಗಿನಿಗಿಂತಲೂ ಈಗ ದೊಡ್ಡವಳಲ್ಲವೆ? ' ಎಂದಳು.

ಭೂಮಂಡಲದಲ್ಲಿ ದುಃಖಿಗಳಾದವರಲ್ಲಿ ನಿಜವಾಗಿ ದುಃಖಿಸುವವರು ಅತಿ ದುರ್ಲಭ—ಒಂದು ಸುಂದರವಾದ ಗುಲಾಬಿಹೂವನ್ನು ನೋಡಿದರೆ ಅದನ್ನು ಪ್ರಯತ್ನ ಪೂರ್ವಕವಾಗಿ ಗ್ರಹಣಮಾಡದಿರುವವರಾರು? ಅದನ್ನು ಪ್ರೀತಿಸದಿರುವವರಾರು? ಅದರಿಂದ ತೃಪ್ತರಾಗದಿರುವವರಾರು? ಆದರೆ ಆ ಗುಲಾಬಿಹೂವು ಒಣಗಿದರೆ ಒತ್ತಡವೆಯಾದರೂ ಮಮತೆಯಿಂದ ಅದನ್ನು ನೋಡುವವರಾರು? ಎಷ್ಟುಮಂದಿ ಅದನ್ನು ನೋಡಿ ಅಕೃತ್ರಿಮ ಶೋಕಾಶ್ರುವನ್ನು ಬಿಡುವರು? ಹಾಗೆಶೋಕಾಶ್ರುವನ್ನು ಬಿಡುವವರಿಲ್ಲದುದರಿಂದಲೇ ಅಕೃತ್ರಿಮವಾದ ಅಶ್ರುಜಲಕ್ಕೆ ಅಷ್ಟೊಂದು ಆದರ—ಪ್ರಪಂಚದಲ್ಲಿ ಸ್ವಾರ್ಥವಿಲ್ಲದ ಪ್ರೀತಿ ವಿಶ್ವಾಸಗಳಿಗೆ ಅಷ್ಟೊಂದು ಹೆಚ್ಚು ಬೆಲೆ. ಜನರು ಸ್ವರ್ಗವನ್ನಾದರೂ ತುಚ್ಛವಾಗಿ ಎಣಿಸಿ ಅಂಥಾ ಪ್ರೀತಿಯನ್ನು ಹೊಂದಲು ಇಷ್ಟವುಳ್ಳವರಾಗಿರುವರು—ಅದರಿಂದ ಮುಗ್ಧರಾಗುತ್ತಾರೆ—ರಮೇಶನೂ ಮನುಷ್ಯ—ಮನುಷ್ಯನಿಗೆ ಸಹಜವಾದಾ ದುರ್ಬಲತೆಗೆ ರಮೇಶನು ಹೊರಗಾಗಿರಲಿಲ್ಲ--ಅವನ ಹೃದಯದ ಕವಾಟವು ತಾನಾಗಿಯೇ ತೆರಕೊಂಡಿತು--ದುಃಖಿಯಲ್ಲಿ ದುಃಖಿಸುವ ದುಃಖಿಯನ್ನುಹೊಂದಲು ಅವನಹೃದಯವು ತೆರಿಯಿತು-ಅವನು, ' ಮಾಲತಿ! ನನ್ನ ದುಃಖವನ್ನು ಕುರಿತು ಕೇಳುವಿಯಾ ? ನನಗಾವದರಿಂದ ಸುಖವೋ ಅದರಿಂದಲೇ ನನಗೆ ದುಃಖ! ಶೋಭನೆಯು ತನ್ನ ಸ್ವಂತ ಕಲ್ಪನಾತಿಶಯದಿಂದ ತಾನೂ ಅಸುಖಿಯಾಗಿ ನನ್ನನ್ನೂ ದುಃಖಿಯಾಗಿ ಮಾಡಿದ್ದಾಳೆ ' ಎಂದು ಹೇಳಿ, ಬಳಿಕ ಶೋಭನೆಗೆ ಉಂಟಾಗಿದ್ದ ಸಂದೇಹದ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳಿದನು.

ಮಾಲತಿಯು ಮೌನವಾಗಿ ಕಣ್ಣಿನೆವೆ ಇಕ್ಕದೆ ಎಲ್ಲವನ್ನೂ ಕೇಳಿದಳು—ಪುನಃ ಅವಳು ಮಾಲತಿಯಾಗಿರಲಿಲ್ಲ—ಅವಳ ಬಾಡಿದ ತುಟಿಗಳು ತಲತಲ ಅದುರಿದುವು--ಯಾತನಾಮಯವಾದ ದೈನ್ಯದೃಷ್ಟಿಯು ಶೂನ್ಯವಾದ ಅಂತರಿಕ್ಷದಲ್ಲಿ ಸೇರಿತು—ಮಾಲತಿಯು ನಿಂತಹಾಗೆ ಅತ್ತಳು. ಯುವಕನೂ ಅಳುವುದಕ್ಕೆ ತೊಡಗಿದನು. ಸಂಧ್ಯಾಕಾಲದಲ್ಲಿ ಸುಖಮಯಿ

ನದಿಯ ವಕ್ಷದಲ್ಲಿ ಅವರಿಬ್ಬರ ಕಣ್ಣಿನ ಪ್ರವಾಹವು ಶಬ್ದವಿಲ್ಲದೆ ಸೇರಿಕೊಂಡಿತು. ಆಕಾಶದಲ್ಲಿ ಚಂದ್ರನಿರಲಿಲ್ಲ. ನೂರಾರು ನಕ್ಷತ್ರಗಳು ಎದ್ದುವು. ಅವು ಆ ದುಃಖವನ್ನು ಸ್ವಲ್ಪವೂ ಅರಿಯವು. ಸ್ವಲ್ಪಸ್ವಲ್ಪ ಮೃದುವಾಗಿ ನಗುತ್ತಿದ್ದುವು. ನಗದೆ ಮತ್ತೇನನ್ನು ಮಾಡಬಲ್ಲವು? ಅವುಗಳಲ್ಲಿ ಮಮತೆಯುಂಟೆಂದು ಎದುರುನೋಡುವವರಾರು? ಅವು ಅನಂತ ಕಾಲದವರೆಗೂ ನಗುವುದಕ್ಕೋಸ್ಕರವೇ ಹುಟ್ಟಿವೆ. ಆದುದರಿಂದ ಅವು ಮಮತೆಯನ್ನು ತೋರದಿದ್ದರೆ ಆರ ಹೃದಯದಲ್ಲಿಯೂ ನೋವಾಗುವುದಿಲ್ಲ. ಆದರೆ ಪ್ರಶಸ್ತವಾದ ಸುಖದಾಯಿ ನದಿಯ ತೀರದಲ್ಲಿ ಮತ್ತಾರು ನರಪ್ರಾಣಿಯೂ ಇಲ್ಲದಿದ್ದುದು ಕ್ಷೇಮ. ಅಲ್ಲಿ ಅವರಿಬ್ಬರ ಕಣ್ಣೀರನ್ನು ನೋಡಿ ನಗುವುದಕ್ಕಾಗಲಿ ಅವರು ಸಾಯುವುದನ್ನು ನೋಡಿ ಹಾಸ್ಯಮಾಡುವುದಕ್ಕಾಗಲೀ ಅವರ ವ್ಯಾಕುಲವನ್ನು ನೋಡಿ ಸಂತೋಷಿಸುವುದಕ್ಕಾಗಲೀ ಆರೂ ಇರಲಿಲ್ಲ. ಅವರಿಬ್ಬರೇ ನಿರ್ವಿಘ್ನವಾಗಿ ಅಳುವುದಕ್ಕೆ ತೊಡಗಿದರು. ಹುಡುಗಿಯು ಅಳುತ್ತಳುತ್ತ, 'ಅಣ್ಣ! ನನನ್ನು ಹೇಳಿದೆ? ಶೋಭನೆಯು ತನಗಿಂತಲೂ ನನ್ನನ್ನು ನೀನು ಹೆಚ್ಚು ಪ್ರೀತಿಸುತ್ತಿಯೆಂದು ತಿಳಿದುಕೊಂಡಿದ್ದಾಳೆಯೆ? ಹಾಗಾದರೆ, ನಿಮ್ಮಿಬ್ಬರ ದುಃಖಕ್ಕೂ ನಾನೇ ಕಾರಣ! ನನಗೋಸ್ಕರವಾಗಿಯೇ ನಿನ್ನ ಪ್ರಫುಲ್ಲವಾದ ಮುಖವು ಮಲಿನವಾಗಿದೆ. ಶೋಭನೆಯ ನಗವೂ ಅಳಿಸಿಹೋಯಿತು, ನಿನ್ನ ಅಶಾಂತಿಗೆ ನಾನೇಮೂಲ! ಅಣ್ಣ ನಾನೇನನ್ನು ಮಾಡಿದರೆ ನೀನು ಮೊದಲಿನಂತೆ ಸುಖಿಯಾಗುವೆ?' ಎಂದು ಹೇಳಿದಳು.

ಮಾಲತಿಯು ನಿಸ್ವಾರ್ಥವಾಗಿ ನುಡಿದಾ ನುಡಿಗಳಿಂದ ಯುವಕನ ಹೃದಯವು ಕಂಪಿತವಾಯಿತು. ಅವಳನ್ನು ಹೇಗೆ ಸಮಾಧಾನಗೊಳಿಸಬೇಕೋ ಅದನ್ನರಿಯದೆ ಯುವಕನು, 'ಮಾಲತಿ! ನನ್ನ ಅಸುಖಕ್ಕೆ ನೀನು ಮೂಲವೆ? ಇಲ್ಲ, ಮಾಲತಿ! ಅಕಾರಣವಾಗಿ ನನಗೆ—

ಮಾಲತಿಯು ಮುಂದಿನ ಮಾತನ್ನು ಹೇಳಗೊಡಿಸದೆ, 'ಇಲ್ಲ, ಅಣ್ಣ! ನಾನೇನನ್ನು ಮಾಡಿದರೆ ನೀನು ಮೊದಲಿನಂತೆ ಸುಖಿಯಾಗುವೆ? ನಾನು ಸತ್ತರೆ ನಿನ್ನ ದುಃಖಮಯವಾದ ಯಾತನೆಯು ಕೊನೆಗಾಣಲಾರದೆ—ಅಣ್ಣ?' ಎಂದು ಹೇಳಿದಳು.

ಸಕಲ ವಿಧವಾದ ಪ್ರೀತಿಗಳಿಗೂ ಮರ್ಮಾಂತಿಕಭಾವವು ಒಂದೇ ಪ್ರಕಾರವೆ? ಪ್ರಿಯಜನರ ಸುಖಕ್ಕೋಸ್ಕರ ಸಾಯ್ಬೇಕೆಂಬ ಇಚ್ಛೆಯು ಪ್ರೀತಿಗೆ ಸ್ವಾಭಾವಿಕ ಉಚ್ಛ್ವಾಸವೆ? ಮಾಲತಿಯ ಮಾತನ್ನು ಕೇಳಿ ರಮೇಶನು ಮೌನವಾಗಿ ಅಳುವುದಕ್ಕೆ ತೊಡಗಿದನು ಅವಳ ಮನದ ಭಾವವನ್ನು ತಿಳಿದುಕೊಂಡವನಾಗಿ ಅವನಾವ ಮಾತಾಡುವುದಕ್ಕೂ ಶಕ್ತನಾಗಲಿಲ್ಲ. ಮಾಲತಿಯೂ ಮತ್ತೇನನ್ನೂ ಹೇಳಲಿಲ್ಲ. ತಾನು ಮನಸ್ಸಿನಲ್ಲಿ ಮಾಡಿಕೊಂಡ ಸಂಕಲ್ಪವನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಳು, ಮೌನದಲ್ಲಿ ಬಹಳ ಹೊತ್ತು ಕಳೆದು ಹೋಯಿತು. ಇಬ್ಬರ ಮನಸ್ಸಿನಲ್ಲಿಯೂ ಎಷ್ಟೋ ಮಾತುಗಳು ನಡೆದು ಹೋದುವು. ಆದರೆ ಇಬ್ಬರಲ್ಲಾರಿಗೂ ಅವುಗಳನ್ನು ಹೊರಪಡಿಸುವುದಕ್ಕೆ ಪ್ರವೃತ್ತಿಯುಂಟಾಗಲಿಲ್ಲ. ಇಬ್ಬರೂ ಗಭೀರ ಚಿಂತೆಯಲ್ಲಿ ಮಗ್ನರಾಗಿ ತಾವುತಾವು ಅಲ್ಲಿ ನಿಂತಿರುವುದನ್ನೂ ಮರೆತರು. ಯುವಕನು ತಾನೊಬ್ಬನೇ ಅಲ್ಲಿರುವವನೆಂಬ ಭಾವದಿಂದ, ತನ್ನೊಳುತಾನೇ, "ಸರ್ವಾಂತಃಕರಣಗಳಿಂದಾವಳನ್ನು ಪ್ರೀತಿಸುತ್ತಿದ್ದೇನೆಯೋ ಅಂಥವಳು ಅಪನಂಬಿಕೆ ಪಡುವುದು ಅದಕ್ಕೆ ತಕ್ಕ ಪ್ರತೀಕಾರವೆ! ಮರ್ಮಾಂತಿಕವಾದೀ ಆಘಾತವೆ, ಆ ಪ್ರೀತಿಗೆ ತಕ್ಕ ಪುರಸ್ಕಾರ!" ಎಂದು ಹೇಳಿಕೊಂಡನು. ಆ ಮಾತಿನಿಂದ ಮಾಲತಿಯು ಎಚ್ಚರಗೊಂಡು 'ಅಣ್ಣಾ! ನಿನ್ನನ್ನು ಕೇಳುವೆ, ನೀನು ಶೋಭನೆಗಿಂತ ನನ್ನನ್ನು ಹೆಚ್ಚಾಗಿ ಪ್ರೀತಿಸುತ್ತಿ ಎಂದು ಅವಳು ನಂಬಿದ್ದಾಳೆಯೇ?' ಎಂದಳು.

ಯುವಕನು ಪ್ರತ್ಯುತ್ತರವನ್ನೂ ಕೊಡಲಿಲ್ಲ. ಮಾಲತಿಯು ಪುನಃ 'ಶೋಭನೆಯು ಮನಸ್ಸಿನಲ್ಲಿ ನಂಬಿರುವುದು, ಅವಳಿಗಿಂತಲೂ ನನ್ನನ್ನು ಹೆಚ್ಚಾಗಿ ಪ್ರೀತಿಸುತ್ತಿಯೆಂದಲ್ಲವೇ?' ಎಂದಳು. ಯಂತ್ರದಂತೆ ನಿಂತಿದ್ದ ಯುವಕನ ಬಾಯಿಂದ "ಅಹುದು" ಎಂಬ ಮಾತು ಹೊರಟಿತು.

ಇದ್ದಹಾಗೆ ಆ ಸಮಯಕ್ಕೆ ಸರಿಯಾಗಿ ಶೋಭನೆಯು ಹಿಂದೆ ಬಂದು ನಿಂತಳು. ಆಗ ಮಾಲತಿಯು ಹೇಳಿದ ಕಡೆಯ "ನನ್ನನ್ನು ನೀನು ಹೆಚ್ಚಾಗಿ ಪ್ರೀತಿಸುತ್ತಿಯೆಂದಲ್ಲವೆ?" ಎಂಬ ಪ್ರಶ್ನೆಯೂ ಅದಕ್ಕೆ ಯುವಕನು ಕೊಟ್ಟ ಕಡೆಯ "ಅಹುದು" ಎಂಬ ಉತ್ತರವೂ ಅವಳ ಕಿವಿಗೆ ಬಿದ್ದುವು. ಅದರಲ್ಲಿ ಮತ್ತೇನೂ ತಪ್ಪಿಲ್ಲ, ಅನುಮಾನವೂ ಇಲ್ಲ, ಆಗವಳ ಕಣ್ಣು

ಗಳಿಗೂ ಕಿವಿಗಳಿಗೂ ಮಧ್ಯೆ ಇದ್ದ ಆವರಣವು ಹರಿಯಿತು. ಅದೆಲ್ಲಾ ಅವಳು ಸುಳ್ಳಾಗಿ ಕಲ್ಪಿಸಿಕೊಂಡುದುದಲ್ಲ, ನಾಲತಿಗೂ ಲಮೋಹಸಿಗೂ ನಡೆದ ಪ್ರೀತಿಯ ಸಂಭಾಷಣೆಯನ್ನು ಸ್ವಂತವಾಗಿ ತನ್ನ ಕಿವಿಗಳಿಂದಲೇ ಕೇಳಿದಳು. ಶೋಭನೆಯು ಉಲ್ಬಣವಾದ ವೇದನೆಯಿಂದ ಜ್ಞಾನವಿಲ್ಲದವಳಂತಾಗಿ ಅಲ್ಲಿ ನಿಲ್ಲದೆ ಸ್ವಲ್ಪ ದೂರ ಹೋಗಿ ನದಿಯ ತೀರದಲ್ಲಿ ಬಂದು ನಿಂತಳು. ತನ್ನ ಸಂಕಲ್ಪವನ್ನು ನೆರವೇರಿಸುವುದಕ್ಕೆ ಮೊದಲು ಒತ್ತಡನೆ ಭೂಮಿಯನ್ನೂ ಒತ್ತಡನೆ ನದಿಯನ್ನೂ ಒತ್ತಡನೆ ಮನೆಯನ್ನೂ ದೃಷ್ಟಿಸಿ ನೋಡಿ ಹೃದಯದಲ್ಲಿ ಕೆಲವು ಭಾವಗಳು ಮೂಡಿದ ವೇಗದಿಂದ ಹುಟ್ಟಿ 'ನಾನಾರು! ನಾನಾರವಳು? ನಾನು ನನ್ನ ಸ್ವಾಮಿಯು ತ್ಯಜಿಸಿದ ಬಳಿಕ ಮತ್ತಾರವಳು? ನನ್ನ ಸ್ವಾಮಿಯು ನನ್ನನ್ನು ನೋಡಬಯಸದಾಗ ಮತ್ತಾರು ನನ್ನನ್ನು ನೋಡಬಯಸುವರು? ನಾನು ಪ್ರಪಂಚಕ್ಕೆ ಬೇಕಾದವಳಲ್ಲ; ಸಮಾಜಕ್ಕೆ ಬೇಕಾದವಳಲ್ಲ; ಬಂಧುಬಳಗದವರಿಗೆ ಬೇಕಾದವಳಲ್ಲ; ಬೇರೇ ಜನರು ಹಾಗಿರಲಿ; ನಾನೇ ನನಗೆ ಬೇಕಾದವಳಲ್ಲ; ಹೀಗಿರುವಾಗ ಬದುಕಿ ಈ ನರಕಯಾತನೆಯನ್ನು ಅನುಭವಿಸಲೇಕೆ? ಇಂದು ನಾನು ಸತ್ತರೆ ಮೊದಲಿನಂತೆ ರಾತ್ರಿ ಹಗಲು ಆಗುವುದು ನಿಲ್ಲುವುದಿಲ್ಲ; ಪ್ರಪಂಚವು ನಡೆಯುವುದು ನಿಲ್ಲುವುದಿಲ್ಲ; ಋತುಗಳು ಯಥಾಪ್ರಕಾರ ಬಂದು ಹೋಗುವುವು; ಅಮಾವಾಸ್ಯೆಯಾದ ಬಳಿಕ ಚಂದ್ರನು ಹುಟ್ಟುತಲೇ ಇರುವನು; ಬಂಧುಬಳಗದವರು ಒತ್ತಡನೆ ಮಾತ್ರ ಕಣ್ಣೀರನ್ನು ಬಿಟ್ಟ ಬಳಿಕ ಮೊದಲಿನಂತೆ ಸಂಸಾರದಲ್ಲಿ ಸಂತೋಷವಾಗಿರುವರು; ನನ್ನ ಸ್ವಾಮಿಯಾದರೋ? ಅವನೂ! ಅವನೇನನ್ನು ಮಾಡುವನು? ಕಣ್ಣೀರು ಬಿಡುವ ಮಾತು ಹಾಗಿರಲಿ; ತನ್ನ ಮಾರ್ಗವು ನಿಷ್ಕಂಟಕವಾಯಿತೆಂದು ಭಾವಿಸಿಕೊಂಡು ಸುಖಿಯಾಗಿಯೇ ಇರುವನು! ಹಾಗಾದರೆ, ಹಾಗಾದರೆ?' ಎಂದು ಹೇಳುತ್ತ ನಾಲ್ಕು ದಿಕ್ಕುಗಳನ್ನು ನೋಡಿದಳು. ತಲೆಯು ತಿರುಗುತ್ತಿದ್ದಿತು. ನಾಲ್ಕು ಕಡೆಯಲ್ಲಿ ಅಂಧಕಾರವು ಹೊರತು ಮತ್ತಾವುದೂ ಕಾಣದು. ಭೂಮಿಯೋ ಕತ್ತಲೆ, ಆಕಾಶವೂ ಕತ್ತಲೆ, ನದಿಯ ನೀರೂ ಕತ್ತಲೆ. ಎಲ್ಲೆಲ್ಲಿಯೂ ಕತ್ತಲೆಮಯ, ಕತ್ತಲೆಯು ಆವರಿಸಿಕೊಂಡು ಸುತ್ತುತ್ತಿದ್ದಿತು. ಶೋಭನೆಯು ಆ ಕತ್ತಲೆಯಲ್ಲಿ ಸುತ್ತುತ್ತಿದ್ದ ನದಿಯ ಸುಳಿಯಲ್ಲಿ ಧುಮುಕಿಬಿಟ್ಟಳು!

ಶೋಭನೆಯು ಹಿಂದೆ ಬಂದುನಿಂತು ಅಕಾರಣವಾಗಿ ಅಲ್ಲಿಂದ ಹೊರಟು ಹೋಗುದನ್ನು ಕಂಡು ರಮೇಶನೂ ಮಾಲತಿಯೂ ಅವಳ ಹಿಂದೆ ಹೋದರು. ಶೋಭನೆಯು ನದಿಯಲ್ಲಿ ಧುಮುಕಿದ ನಿಮಿಷವೇ ರಮೇಶನೂ ನದಿಯಲ್ಲಿ ಹಾರಿ ಅವಳನ್ನು ನೀರಿನಿಂದೆತ್ತಿ ತೀರಕ್ಕೆ ತಂದನು. ಮಾಲತಿಯು ಕಲ್ಲಿನ ಪ್ರತಿಮೆಯಂತೆ ಸ್ತಂಭಿತೆಯಾಗಿ ಅಲ್ಲಿಯೇ ನಿಂತಿದ್ದಳು.

## ನಾಲ್ಕನೆಯ ಪರಿಚ್ಛೇದ.

ರಮೇಶನು ಶೋಭನೆಯನ್ನು ಎತ್ತಿಕೊಂಡು ಒಂದು ಮನೆಯಲ್ಲಿ ಮಲಗುವ ಕೊಠಡಿಯಲ್ಲಿ ಸೋಫದಮೇಲೆ ಮಲಗಿಸಿ ತಾನು ಅವಳ ಪಾರ್ಶ್ವದಲ್ಲಿ ಕುಳಿತುಕೊಂಡನು. ಶೋಭನೆಯು ನಾಲ್ಕು ಕಡೆ ನೋಡಿದಳು. ಈ ಜನ್ಮದಲ್ಲಿ ಪುನಃ ನೋಡುವುದಿಲ್ಲವೆಂದು ಯೋಚಿಸಿದ್ದ ಪದಾರ್ಥಗಳು ಪುನಃ ಅವಳ ಕಣ್ಣಿಗೆ ಬಿದ್ದುವು. ಅದೇ ಮನೆ ಅದೇ ಕೊಠಡಿ, ವಿಶಾಲವಾದ ಪೆಟ್ಟಿಗೆ [illegible] ಚಿತ್ರ ಇದ್ದ ಹಾಗಿವೆ ಸುಂದರ ಚಿತ್ರಗಳಿಗೆ ಕಾರಣವಾದ [illegible] ಅನೇಕ ಕೆಲಸಕಾರ್ಯಗಳು ನಡೆದಿದ್ದ ಅದೇ ಮನೆ. ತಾನು ಮಲಗಿದ್ದ ಹಾಸಿಗೆಯು ಹಾಸಿದ್ದಂತೆಯೇ ಇದೆ, ಸೋಫದ ಬಳಿ ಇದ್ದ ಸಣ್ಣ ಮೇಜಿನಮೇಲೆ ರತ್ನಾವಳಿ ನಾಟಕ, ಉತ್ತರರಾಮಚರಿತ್ರೆ, ಶಕುಂತಲೆ ಮುಂತಾದ ಪುಸ್ತಕಗಳು ಹಾಗೆಯೇ ಇವೆ, ದೀಪವು ಉರಿಯುತ್ತಿದೆ, ಆದರೆ ಎಣ್ಣೆಯಿಲ್ಲದೆ ಪ್ರಕಾಶವು ಕಡಿಮೆ; ಸಾಯುವವನ ಪ್ರಾಣದಂತೆ ತುಡುಕೊಳ್ಳುತ್ತಿದೆ, ನೊಂದಿಹೋಗುವಂತಾಗಿ ನೊಂದಿಹೋಗುವುದಿಲ್ಲ, ಶೋಭನೆಯ ಪ್ರಾಣವೂ ಹಾಗೆಯೇ ನೊಂದಿಹೋಗಿದ್ದುದು ನೊಂದಿಹೋಗಲಿಲ್ಲ; ಶೋಭನೆಯು ನಾಚಿಕೆಯಿಂದ ಇದುವರೆಗೂ ಸ್ವಾಮಿಯ ಮುಖವನ್ನು ನೋಡದಿದ್ದವಳು ಆಗ ನೋಡಿದಳು. ಆ ಹೃದಯರತ್ನವನ್ನು ನೋಡುವ ಆಶೆಯನ್ನು ತೊರೆದಿದ್ದಳೋ ಅಂಥಾ ಸ್ವಾಮಿಯು ಪುನಃ ದೊರಕುವನೆ ? ವ್ಯಗ್ರಭಾವದಿಂದ ಅಂಥಾ ಸ್ವಾಮಿಯನ್ನು ನೋಡಿದಳು. ವಿಷಾದದಿಂದ ಗಂಭೀರವಾಗಿದ್ದ

ರಮೇಶನ ಮುಖವನ್ನು ನೋಡಿ ಶೋಭನೆಯು ತಲೆತಗ್ಗಿದವಳಾಗಿ ಮೌನವಾಗಿ ಅಳುವುದಕ್ಕೆ ತೊಡಗಿದಳು. ರಮೇಶನೂ ಮೌನವಾಗಿ ಅಳುವುದಕ್ಕೆ ತೊಡಗಿದನು.

ಒಂದು ಕ್ಷಣಕಾಲದಲ್ಲಿ ಒಂದು ಅಲ್ಪವಾದ ಕೆಲಸವು ಒಬ್ಬ ಮನುಷ್ಯನ ಜೀವನ ಚರಿತ್ರೆಯನ್ನು ಶುದ್ಧವಾಗಿ ಬದಲಾಯಿಸಿಬಿಡುವಂತೆ ಬಹುಕಾಲ ವ್ಯಾಪಿಯಾದ ಮಹತ್ತಾದ ದೊಡ್ಡಕಾರ್ಯವೂ ಅದಲುಬದಲು ಮಾಡಲಾರದು. ಇಂಗ್ಲಾಂಡು ದೇಶಕ್ಕೆ ರಾಜಮಂತ್ರಿಯಾಗಿದ್ದ ಡಿಜರೇಯಿಲಿಯು, ಮನುಷ್ಯನ ಜೀವನಚರಿತ್ರೆಯು ಸಣ್ಣ ಸಣ್ಣ ಘಟನಾವಳಿಯ ಸಮಷ್ಟಿಮಾತ್ರವೆಂದು ಹೇಳಿದ್ದಾನೆ. ನೂರಾರುವರ್ಷಗಳ ರಾಜ್ಯಪರಿವರ್ತನೆಯಿಂದುಂಟಾಗದ ಕಾರ್ಯಸಾಧನೆಯು ಒಂದೊಂದು ಸಮಯದಲ್ಲಿ ಒಂದು ಸಣ್ಣ ಕೆಲಸದಿಂದ ಒಂದು ನಿಮಿಷದಲ್ಲಿ ಸಂಪೂರ್ಣವಾಗಿ ಸಾಧಿಸಲ್ಪಡುತ್ತದೆ. ಆಕಳ ಕಳವಿಗೋಸ್ಕರ ಶಿಕ್ಷಿಸಲ್ಪಡದಿದ್ದರೆ ಮಹಾಕವಿಯಾಗಿದ್ದ ಷೇಕಸ್ಪಿಯರನ ಹೆಸರನ್ನು ಆರೂ ಕೇಳುತ್ತಿರಲಿಲ್ಲ.

ಅರಸಾದವನು ಬೀದಿಯಲ್ಲಿ ಭಿಕ್ಷುಕನಾದರೂ ಜೀವನಧಾರಣೆಯಂ ಮಾಡುವನು. ಪ್ರಿಯತಮರಾದ ಮಕ್ಕಳ ವಿಯೋಗವಾದರೂ ಸಹಿಸಿಕೊಂಡಿರಬಹುದು. ಪ್ರಣಯದಲ್ಲಿ ಭಗ್ನಹೃದಯರಾದವರೂ ಜೀವದಿಂದ ಬದುಕಿರುವರು. ಆದರೆ ನಿಮಿಷದಲ್ಲಿ ನುಡಿದ ಅನಾದರದೊಂದು ನುಡಿಯಿಂದುಂಟಾಗುವ ವಿಪತ್ತನ್ನು ಸಹಿಸಲಸಾಧ್ಯ. ಅಂಥಾ ಕಟೂಕ್ತಿಯಿಂದ ಹೃದಯದ ತಂತ್ರಿಯು ಕ್ಷಣಕಾಲದಲ್ಲಿ ಹರಿದು ಪುನಃ ಸರಿಯಾಗಿ ಪೂರ್ವಸ್ಥಿತಿಗೆ ಬರುವುದು ಕಷ್ಟ. ಒಂದೊಂದು ವೇಳೆ ಜೀವನಕ್ಕೆ ದಿಗ್ದರ್ಶಿಯಾದ ಮುಳ್ಳು ಮಾರ್ಗತಪ್ಪಿಹೋಗಿ ಪುನಃ ಸರಿಯಾದ ಮಾರ್ಗಕ್ಕೆ ಬರುವುದು ಕಷ್ಟವಾಗಬಹುದು. ಗರ್ವಿತವಾದ ಹೃದಯವುಳ್ಳವನು ದುರ್ಲಂಘ್ಯವಾದ ದಾರಿದ್ರ್ಯದ ದುರ್ದಶೆಗೊಳಗಾಗಿ ಕಷ್ಟಪಡುತ್ತಿದ್ದರೂ ಲಕ್ಷ್ಯಮಾಡದೆ ಇರುವನು. ಒಂದೊಂದು ಪಾಷಾಣಮಯ ಹೃದಯವು ನೂರಾರು ಜನರ ರಕ್ತಪ್ರವಾಹದೆದುರಿಗಿದ್ದರೂ ವಿಕಾರವನ್ನು ಹೊಂದಲಾರದು. ಅಂಥಾ ಪಾಷಾಣಮಯ ಹೃದಯವೂ ಒಂದು ಮಮತಾಪೂರ್ಣವಾದ ನುಡಿಯಿಂದ ಕರಗಿಹೋಗುವುದು. ಅಂಟೋನಿಯನು ಅತ್ಯಂತಕಷ್ಟದಲ್ಲಿಯೂ ಅಪಾ

ರವಾದ ವಿಸ್ತಾರವನ್ನು ಅತಿಕ್ರಮಿಸಿ ಅಲ್ಪಸಂಖ್ಯೆಯ ಸೈನ್ಯದಿಂದ ಕೆಸಿಯಸನೂನ ಬ್ರೂಟಸನನ್ನೂ ಸೋಲಿಸಿದ್ದನು. ಅಂಥಾ ಧೀಮ ಪರಾಕ್ರಮಶಾಲಿಯಾದ ಮಹಾ ವೀರಪುರುಷನಾದ ಆಂಟೋನಿಯನೇ, ಕ್ಲಿಯೊಪೇಟ್ರಿಯ ಕಣ್ಣಿಂದ ಬಿದ್ದ ಒಂದು ಕಂಬನಿಯನ್ನು ಕಂಡು ತಾನು ಜಯಶಾಲಿಯಾಗುವುದಕ್ಕೆ ಪೂರ್ವಕ್ಷಣದಲ್ಲಿ ಕಾಪುರುಷನಂತೆ ಯುದ್ಧದಿಂದ ವಿಮುಖನಾಗಿ ಪಲಾಯನವಾಗಿ ಓಡಿಹೋಗಲಿಲ್ಲವೆ ? ಮನ ಹೃದಯವು ಯಾವಾಗ ಯಾವದರಿಂದ ಹೇಗೆ ಏನಾಗುವುದೋ ಅದನ್ನು ನಿರ್ಣಯಿಸುವುದು ಕಷ್ಟ. ನ್ಯೂಟನನೂ ಗೆಲಿಲಿಯನೂ ಬಹಳ ಯೋಚಿಸಿ, ಬಾಹ್ಯ ಪ್ರಪಂಚದ ವ್ಯಾಪಾರದ ನಿಯಮಗಳನ್ನು ಕಂಡು ಹಿಡಿದರು. ಆದರೆ ಮನದ ಜಗತ್ತಿನ ವ್ಯಾಪಾರವನ್ನು ಕಂಡು ಹಿಡಿದ ನ್ಯೂಟನನೊಬ್ಬನು ಇನ್ನೂ ಹುಟ್ಟಿಲ್ಲ. ಮುಂದೆ ಅಂಥವರಾರು ಹುಟ್ಟುವರೋ ಇಲ್ಲವೋ ಅದನ್ನು ಬಲ್ಲವರಾರು ?

ಇಂದು ಸಂಜೆಯಲ್ಲಿ ನಡೆದೊಂದು ಸಣ್ಣ ಕೆಲಸದಿಂದ ಶೋಭನೆಯ ಜೀವನದ ಪ್ರವಾಹವು ಶುದ್ಧವಾಗಿ ಮಾರಿಹೋಯಿತು. ಅವಳು ಎಲ್ಲವನ್ನೂ ಹೊಸದಾದುದಾಗಿ ಕಂಡಳು. ನೀರಲ್ಲಿ ಮುಳುಗಿದ್ದ ಉತ್ತರಕ್ಷಣದಿಂದಲೇ ಶೋಭನೆಯ ಜೀವನ ರೀತಿಯು ಹೊಸದಾಗಿ ಆರಂಭವಾಯಿತು. ರಮೇಶನನ್ನು ಮೊದಲಿನಂತೆ ಸ್ನೇಹಮಯನಾದ ಗಂಡನೆಂದು ಕಂಡಳು. ಅವನಲ್ಲಿ ಪ್ರಣಯವು ಹೊರ್ತು ಮತ್ತೇನೂ ಕಂಡು ಬರಲಿಲ್ಲ. ಒಂದು ಕ್ಷಣಕಾಲದಲ್ಲಿ ಅವನು ಹೇಗೆ ಬೇರೆ ವಿಧವಾಗಿ ಕಾಣುಬಂದನೋ ಅದನ್ನು ತಾನೇ ಅರಿಯಳು. ಮೆಲ್ಲಮೆಲ್ಲನೆ ಅವರು ಮಾತಾಡುವುದಕ್ಕೆ ಪ್ರಾರಂಭಿಸಿದರು. ಮೆಲ್ಲಮೆಲ್ಲನೆ ಹೊಸದಾದ ಪ್ರೇಮದ ನುಡಿಗಳಿಂದ ಕ್ಷಮೆಯನ್ನು ಬೇಡಿದಳು. ನಡೆದ ವಿದ್ಯಮಾನಗಳನ್ನು ರಮೇಶನಿಂದ ಆನುಪೂರ್ವಿಕವಾಗಿ ಕೇಳಿ ಅವಳ ಹೃದಯವು ಅನುತಾಪದಿಂದ ತುಂಬಿತು. ಆ ಅನುತಾಪವಾದರೋ, ಮನಃಪೂರ್ವಕವಾದುದು, ಮಿಶ್ರಿತವಾದುದಲ್ಲ; ಆ ಅನುತಾಪದಲ್ಲಿ ಸಂದೇಹವಾಗಲೀ ಅಪನಂಬಿಕೆಯಾಗಲೀ ಕಂಡುಬರಲಿಲ್ಲ. ರಾತ್ರಿ ಹತ್ತು ಘಳಿಗೆಗಳಾದುವು. ಈಗಲೂ ಆ ಒದ್ದೆ ಬಟ್ಟೆಯಲ್ಲಿಯೇ ಇದ್ದರು. ಒದ್ದೆ ಬಟ್ಟೆಯು ಮೈಮೇಲಿದ್ದ ಹಾಗೆ ಒಣಗಿಹೋಗಿದ್ದಿತು. ಶೋಭನೆಯು ಜ್ಞಾಪಿಸಿಕೊಂಡು ರಮೇಶನ ಬಟ್ಟೆಯನ್ನು ಮುಟ್ಟಿನೋಡಿ, 'ನನ್ನಿಂದ ತಮಗೆ ಬಹಳ ಕಷ್ಟವಾಯಿತು! ಅದಕ್ಕಿಂ

ತಲೂ ನನ್ನ ಪ್ರಾಣವು ಹೋಗಿದ್ದರೆ ಚೆನ್ನಾಗಿದ್ದಿತು. ಎಷ್ಟೋ ಪುಣ್ಯವನ್ನು ಮಾಡಿ ಹೊಂದಿರುವ ಸ್ವಾಮಿಯನ್ನು ಸುಖಪಡಿಸಲಾರದೆಹೋದೆನು. ನನಗೆ ಸಲುವಾಗಿ ನಿನಗೆ ಇಷ್ಟು ಕಷ್ಟ!' ಎಂದು ಹೇಳಿದಳು. ಅವಳ ಕಣ್ಣಿಂದ ಎರಡು ಬೊಟ್ಟು ನೀರುಬಿದ್ದಿತು. ರಮೇಶನು ನೋಡಿ, 'ಶೋಭನೆ! ಅದೇನು, ಪುನಃ ಕಷ್ಟ ಬಂದಿತು! ಪ್ರಪಂಚದಲ್ಲಿ ಈಗ ನನ್ನ ಹಾಗೆ ಮತ್ತಾರೂ ಸುಖಿಯಲ್ಲ. ನಿನ್ನ ಮೊದಲಿನ ಮನಸ್ಸು ಬದಲಾಯಿಸಿತು. ನಿನ್ನ ಅಪನಂಬಿಕೆಯು ಹೋಯಿತು. ಮತ್ತಾವ ಕಷ್ಟಬಂದರೂ ಲಕ್ಷ್ಯಮಾಡೆನು' ಎಂದು ಹೇಳುತ್ತಿರುವಾಗ ರಾತ್ರಿಯ ನಿಸ್ತಬ್ಧತೆಯು ಭಂಗವಾಗಿ ದೂರದಲ್ಲಿ ಗಗನವು ಸಂಗೀತಧ್ವನಿಯಿಂದ ತುಂಬಿತು. ರಮೇಶನು ಧ್ವನಿಯಿಂದ ಮಾಲತಿಯೆಂದು ತಿಳಿದನು. ಅಷ್ಟು ರಾತ್ರಿಯಾದರೂ ಮಾಲತಿಯು ಮನೆಗೆ ಬಂದಿರಲಿಲ್ಲ. ಒಬ್ಬಳೇ ತಿರುಗಾಡುತ್ತಿದ್ದಾಳೆ. ರಮೇಶನು ಆಶ್ಚರ್ಯಪಟ್ಟು, 'ಶೋಭನೆ! ಮಾಲತಿಯು ಮನೆಗಿನ್ನೂ ಬಂದಿಲ್ಲ. ಒಬ್ಬಳೇ ತಿರುಗಾಡುತ್ತಿದ್ದಾಳೆ!' ಎಂದು ಹೇಳುತ್ತಿದ್ದಹಾಗೆ ಸ್ವಲ್ಪ ನಕ್ಕು, 'ಶೋಭನೆ! ಅವಳಿಂದ ನಮಗೆ ಮತ್ತೆಷ್ಟು ತೊಂದರೆಯೋ? ಎಷ್ಟು ಪ್ರೇಮವನ್ನು ತೋರಬೇಕು! ನೋಡು' ಎಂದನು. ಶೋಭನೆಯು ನಾಚಿಕೊಂಡು, 'ನಿಜವಾಗಿಯೂ ಮಾಲತಿಯು ಬಹಳ ಒಳ್ಳೆಯ ಹುಡುಗಿ, ಒಬ್ಬಳೇ ಹೊರಗೆ ಇದ್ದಾಳೆ, ಇಂದಿನ ಕಾರ್ಯಗಳನ್ನೆಲ್ಲಾ ನೋಡಿ, ಸಂಕೋಚದಿಂದ ಮನೆಗೆ ಬಂದಿಲ್ಲವೆಂದು ತೋರುತ್ತದೆ, ಅವಳಲ್ಲಿ ನಾನು ಹೆಚ್ಚು ಅಪರಾಧಿಯಾಗಿದ್ದೇನೆ, ನಾನೇ ಹೋಗಿ ಅವಳನ್ನು ಕರೆತರುತ್ತೇನೆ, ನಾನು ಹೋಗಿ ಅವಳಲ್ಲಿ ಕ್ಷಮಾಪ್ರಾರ್ಥನೆಯನ್ನು ಮಾಡುತ್ತೇನೆ, ನಾನು ನೂರಾರು ತಪ್ಪನ್ನು ಮಾಡಿದರೂ ಅವಳು ಕೋಪಿಸಿಕೊಳ್ಳುತ್ತಿರಲಿಲ್ಲ. ಈ ದಿನ ಹೋಗಿ ಅವಳ ಕಾಲನ್ನು ಮುಟ್ಟಿ ಬೇಡಿಕೊಂಡರೆ ಮನ್ನಿಸಲಾರಳೆ? ಎಂದಳು.

ರಮೇಶ—ಬೇಡ--ಹೊರಗೆ ಬಹಳ ಕತ್ತಲೆ. ಮಾಲತಿಯು ಎಲ್ಲಿದ್ದಾಳೋ ಗೊತ್ತಾಗುವುದಿಲ್ಲ. ನೀನು ಹೋಗಬೇಕಾದ ಅವಶ್ಯಕವಿಲ್ಲ. ನಾನೇ ಹೋಗಿ ಹುಡುಕಿಕೊಂಡು ಬರುವೆನು.

ಪುನಃ ಸಂಗೀತದ ಧ್ವನಿಯುದ್ದಿತು. ತೆರೆದಿದ್ದ ಕಿಟಕಿಯಿಂದ ಶಬ್ದವು ಚೆನ್ನಾಗಿ ಕೇಳಿತು. ಇಬ್ಬರೂ ಸಂಗೀತವನ್ನು ಆಲೈಸಿ ಕೇಳಿದರು.

ಪದ್ಯ— ಮನುಜರುಸಿರುಂ ಸುಳಿಯದಿಹ ನಿ | ರ್ಜನವೆನಿಸಿದರೆ ದೂರವೆನಿಸಿದ | ವನವಸ್ಥದ
ಳ್ಕೊರ್ವಳೇ ಸನ್ನದ್ಧೆಯಾಗಿಹೆನ || ಮನದೊಳೆನ್ನೊಂದಾಸೆ ತಾನಿ ಲ್ಲೆನಗುದಾಸೀನೆಯುಮನಾಥೆಯು |
ಹೆನಿಸಿರುವೆನಿಲಿಂದಿದೋ ಪೊರಮಟ್ಟು ನಿಂದಿಹೆನು ||೧||

ಒಲುಮೆಯುಂ ಪ್ರತಿದಾನದಾಪ್ರತಿ | ಫಲಗೊಳಿಸಲೆದಿರ್ಗೆಸಗಾದುದು | ವಿಲಯಮುಳಿಟ್ಟಾ ಮುಗಿದುದೆ
ನ್ನೊಳಗಿರ್ದ ಸುಖದಾಸೆ || ನೆಲದೊಳಗೆ ಸುಖಪಡುವ ಪುಣ್ಯದ | ನೆಗಳಾಗಿರ್ಪರ ಸುಖವನಾ | ನಳಿಸೆ
ನೀವು ಸಾಕ್ಷಿಗಳಾಗಿರೆಲೇ | ಜೋಪರಾಜಿತ ಸೂರ್ಯಶಶಿತಾ | ರಾವಳಿ ಗಿರಿನದಿಗಳಿರ ವೃಕ್ಷಲತೆಗಳಿರಾ ||
ನೋವಿನೊಳಗಾನೆಲ್ಲಿ ಮಡಿವೊಡ | ಮೋವುವೊ ನೋಡುತ್ತಿರ್ಪೆನೊಲವಿಂ | ನೀವು ಸುಖಪಡಿರೊಪ್ಪಿ
ಬಗೆ ಸಂತೋಷಿಸುವೆ ನಾನು ||೨|| (ಸೊ. ಅ.)

ಸಂಗೀತವು ಅವನ ಹೃದಯದ ತಳವನ್ನು ಮುಟ್ಟಿತು. ವಿಷಾದಮಯವಾಗಿ ಗಗನವನ್ನು ಮುಟ್ಟಿ ಸೊಡೆಯನ್ನು ಕರೆಯುತ್ತಿದ್ದ ಸಂಗೀತವನ್ನು ಕೇಳಿ ರಮೇಶನು ಚಕಿತನಾದನು. ಗೊತ್ತಾಗದ ಕಾರಣದಿಂದ ಅವನ ಹೃದಯವು ಚಂಚಲವಾಯಿತು. ಹೃದಯದಲ್ಲಾವದೋ ಒಂದು ವೇದನೆಯುಂಟಾಯಿತು, ಎದ್ದು ಬಾಗಿಲ ತೆರೆದನು. ಕೂಡಲೇ ಗಾಳಿಯು ಹೊಕ್ಕು ಉರಿಯುತ್ತಿದ್ದ ದೀಪವು ನಂದಿಹೋಯಿತು. ಮನೆಯು ಅಂಧಕಾರಮಯವಾಯಿತು. ಕತ್ತಲೆಯಲ್ಲಿ ಶೋಭನೆಯು ಭಯಪಡುತ್ತಿರಲಿಲ್ಲವಾದರೂ ಗೊತ್ತಿಲ್ಲದೇನೋ ಒಂದು ಭಯವುಂಟಾಗಿ ಅತ್ತಳು. ರಮೇಶನು ಹಿಂದಿರುಗಿ ನೋಡಿದನು. ಶೋಭನೆಯು ನದಿಯಲ್ಲಿ ಬಿದ್ದದ್ದ ಸಂಗತಿಯು ನೆನವಿಗೆ ಬಂದು ನಡುಗಿದನು. ಇದ್ದಹಾಗೆ ಸಂಗೀತವು ನಿಂತುಹೋಯಿತು. ಆ ರಾತ್ರಿಯ ನಿಶ್ಶಬ್ದತೆಯು ತನ್ನ ಆಧಿಪತ್ಯವನ್ನು ಪುನಃ ವಿಸ್ತರಿಸಿಕೊಂಡಿತು. ಅದರೊಂದಿಗೆ ಒಂದು ಸ್ಥಿರವಾದ ವಿಷಾದದ ಭಾವವು ರಮೇಶನ ಹೃದಯವನ್ನು ಆವರಿಸಿಕೊಂಡಿತು. ರಮೇಶನು ವ್ಯಾಕುಲದಿಂದ ಆ ಕತ್ತಲೆಯಲ್ಲಿ ಕತ್ತಲೆ ಕವಿದಿದ್ದ ನದಿಯ ತೀರಕ್ಕೆ ಓಡಿಬಂದನು. ಅವನ ಮನಸ್ಸು ಏಕೆ ಅಂಥ ದಾರುಣವಾದ ವ್ಯಸನದಿಂದ ಭಾರಾಕ್ರಾಂತವಾಯಿತೋ ಅದನ್ನರಿಯದೆಹೋದನು.

ಎಲ್ಲಿ ನೋಡಿದರೂ ಕತ್ತಲೆ, ದಿಗಂತವಾದ ಕತ್ತಲೆ, ನಿಶ್ಶಬ್ದ ! ಆಕಾಶದಲ್ಲಿ ಸಾವಿರಾರು ನಕ್ಷತ್ರಗಳು, ಆದರೂ ಆಕಾಶವೆಲ್ಲಾ ಕತ್ತಲೆ, ಮರದ ಎಲೆ ಎಲೆಯಲ್ಲಿಯೂ ಲೆಕ್ಕವಿಲ್ಲದ ಮಿಂಚಿನ ಹುಳುಗಳು, ಆದರೂ

ಕೆಳಗೆಲ್ಲಾ ಕತ್ತಲೆ. ಕತ್ತಲೆಯು ಆವರಿಸಿಕೊಂಡಿದ್ದ ನಿಶ್ಶಬ್ದವಾದಾ ನದಿಯ ತೀರದಲ್ಲಿ ಹೋಗುತ್ತಿರುವಾಗ ರಮೇಶನು ಒಂದಸಾಧಾರಣ ಭಯದಿಂದ ನಡುಗಿದನು. ಅವನ ಹೃದಯವು ಸ್ತಂಭಿತವಾಗಿ ನರಗಳಲ್ಲಿ ರಕ್ತಪ್ರವಾಹವು ನಿಂತುಹೋದಹಾಗಾಗಿ ನಡೆಯುವ ಶಕ್ತಿಯು ಉಡುಗಿಹೋಯಿತು; ಆದರೆ ಇದ್ದಹಾಗೆ, ಅದೇನು? ಏನೋ ಶಬ್ದವಾದಹಾಗಾಯಿತು ! ನದಿಯನೀರಲ್ಲಿ ಭಾರಪದಾರ್ಥವಾವದೋ ಬಿದ್ದ ಶಬ್ದ !

ಪುನಃ ಆ ಸಂಜೆಯಲ್ಲಿ ನಡೆದ ಭಯಾನಕವಾದಾ ಘಟನೆಯು ರಮೇಶನ ಮನಕೆ ಹೊಳೆಯಿತು. ಮೈಯೆಲ್ಲಾ ಮುಳ್ಳಿಂದ ಚುಚ್ಚಿದಹಾಗಾಯಿತು. ರಮೇಶನಿಗೆ ನಿರ್ಜೀವವಾಗಿದ್ದ ಪ್ರಾಣದಲ್ಲಿ ಪ್ರಾಣವುಬಂದಿತು, ನಾಡಿಯಲ್ಲಿ ರಕ್ತಚಲನೆಯುಂಟಾಯಿತು. ಕಾಲಲ್ಲಿ ಬಲವು ಬಂದಿತು. ರಮೇಶನು, 'ಮಾಲತಿ! ಮಾಲತಿ!' ಎಂದುಕೂಗುತ್ತ ಶಬ್ದವು ಕೇಳಬಂದಿದ್ದ ದಿಕ್ಕಿಗೆ ಓಡಿಹೋದನು. ನದಿಯ ಧಡದಲ್ಲಿ ಎತ್ತರವಾಗಿದ್ದೊಂದು ಗಡ್ಡೆಯಮೇಲೆ ನಿಂತು ನೋಡಿದನು. ಆಸ್ಥಳದಲ್ಲಿ ಎದ್ದಿದ್ದ ಅಲೆಗಳು ತಂಡತಂಡವಾಗಿ ಅಳಸಿಹೋಗಿ ಆಳವಾಗಿ ಹರಿಯುತ್ತಿದ್ದ ನದಿಯ ಪ್ರವಾಹದೊಂದಿಗೆ ಸೇರಿಹೋಗುತ್ತಿದ್ದಿತು. ರಮೇಶನು ತುದಿಗಾಲಲ್ಲಿ ನಿಂತು ಕುತ್ತಿಗೆಯನ್ನೆತ್ತಿ ದೃಷ್ಟಿಸಿ ನೋಡಿದನು. ನದಿಯಲ್ಲಿ ತೆರೆಗಳಿರಲಿಲ್ಲ. ಎಲ್ಲಾ ಸಾಮಾನ್ಯವಾಗಿದ್ದಹಾಗೆ ಕಂಡಿತು. ಸುರಮಯಿಯು ನಿಶ್ಶಬ್ದವಾಗಿ ಹರಿಯುತ್ತಿತ್ತು. ರಮೇಶನು ನಾಲ್ಕುಕಡೆಯೂ ನೋಡಿದನು. ಮಾಲತಿಯ ಚಿಹ್ನೆಗಳಾವವೂ ಕಂಡುಬರಲಿಲ್ಲ. ರಮೇಶನು ಹುಚ್ಚನಹಾಗೆ, 'ಮಾಲತಿ! ಮಾಲತಿ!' ಎಂದುಕೂಗಿದನು. ನದಿಯೂ ಆಕಾಶವೂ ದಿಕ್ಕುಗಳೂ ರಮೇಶನಾ ಆರ್ತನಾದಕ್ಕೆ ಮಾರುದನಿಯನ್ನು ಕೊಟ್ಟುವು. ಆದರೆ, ಆವ ಮಾಲತಿಯಾಗಲೀ ಉತ್ತರವನ್ನು ಕೊಡಲಿಲ್ಲ !

# ಶುದ್ಧಾಶುದ್ಧ

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
| --- | --- | --- | --- |
| ೨೫ ಕೆಳಗಿಂದ | ೫ | ಅಕಾರಣವಾಗಿ | ಅಕಾರಣವಾಗಿ |
| ೩೦ | ೧ | ಕೆಸಿಯಾಸನೂನ | ಕೆಸಿಯಾಸನೂ |

PRINTED BY

S. NANJUNDA SASTRI

AT THE SREENIVASA PRESS, MYSORE, 1913.